# ಜನತಾ ವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಡಿಸೆಂಬರ್ 31, 2024

ಸಂಪುಟ : 51 ಸಂಚಿಕೆ : 228 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## 2024ರಲ್ಲಿ ಶೇ. 3ರಷ್ಟು ಕುಸಿದ ರೂಪಾಯಿ, ಮುಂದಿನ ವರ್ಷ ಪರಿಸ್ಥಿತಿ ಸುಧಾರಣೆ ನಿರೀಕ್ಷೆ

ಮುಂಬೈ, ಡಿ. 30- 2024ರಲ್ಲಿ ಡಾಲರ್ ಎದುರು ರೂಪಾಯಿ ಶೇ. 3ರಷ್ಟು ಕುಸಿದಿದೆ. ಆರ್ಥಿಕ ಬೆಳವಣಿಗೆ ಕುಂಠಿತವಾಗಿರುವುದು ಇದಕ್ಕೆ ಕಾರಣವಾಗಿದೆ. ಆದರೆ ಜಾಗತಿಕವಾಗಿ ಕರೆನ್ಸಿಗಳಲ್ಲಿ ಆಗಿರುವ ಏರಿಳಿತಗಳನ್ನು ನೋಡಿದರೆ ರೂಪಾಯಿ ಉತ್ತಮ ಸ್ಥಿತಿಯಲ್ಲಿದೆ. ಮುಂದಿನ ವರ್ಷ ಪರಿಸ್ಥಿತಿ ಇನ್ನಷ್ಟು ಸುಧಾರಿಸುವ ಸಾಧ್ಯತೆ ಇದೆ.

2024ರ ಅಂತ್ಯ ಕಾಣುತ್ತಿರುವಂತೆಯೇ ಡಾಲರ್ ಎದುರು ರೂಪಾಯಿ ತಳಮಟ್ಟಕ್ಕೆ ಕಂಡಿದೆ. 2024ರಲ್ಲಿ ಆದ ಹಲವಾರು ಬೆಳವಣಿಗೆಗಳು ರೂಪಾಯಿ ಅಪಮೌಲ್ಯಕ್ಕೆ ಕಾರಣವಾಗಿವೆ. ರಷ್ಯಾ ಸಮರದಿಂದ ಹಿಡಿದು ಮಧ್ಯ ಪ್ರಾಚ್ಯದಲ್ಲಿ ವ್ಯಾಪಾರಕ್ಕೆ ಆದ ಅಡ್ಡಿಗಳು ಹಾಗೂ ಪ್ರಮುಖ ಆರ್ಥಿಕತೆಯ ದೇಶಗಳಲ್ಲಿ ನಡೆದ ಚುನಾವಣೆಗಳು ರೂಪಾಯಿ ಮೇಲೆ ಪರಿಣಾಮ ಬೀರಿವೆ. ಪ್ರಮುಖ ದೇಶಗಳ ಕೇಂದ್ರೀಯ ಬ್ಯಾಂಕುಗಳು ತೆಗೆದುಕೊಂಡ ಕ್ರಮಗಳು ಸೇರಿದಂತೆ ಹಲವು ಜಾಗತಿಕ ಅಂಶಗಳೂ ರೂಪಾಯಿ ಮೌಲ್ಯದ ಮೇಲೆ ಪರಿಣಾಮ ಬೀರಿವೆ. ಕೇವಲ ರೂಪಾಯಿ ಅಷ್ಟೇ ಅಲ್ಲದೇ ಎಲ್ಲಾ ಅಭಿವೃದ್ಧಿಶೀಲ ದೇಶಗಳ ಕರೆನ್ಸಿಗಳ ವಿನಿಮಯ ದರದ ಮೇಲೆ ಪರಿಣಾಮ ಕಂಡು ಬಂದಿದೆ.

ಹಾಗೆ ನೋಡಿದರೆ ಇತರೆ ಕರೆನ್ಸಿಗಳನ್ನು ಹೋಲಿಸಿದರೆ ಡಾಲರ್ ಎದುರು ರೂಪಾಯಿ ಕುಸಿದಿರುವುದು ಕಡಿಮೆ ಎನ್ನಬಹುದು. ಯೂರೋ ಹಾಗೂ (2ನೇ ಪುಟಕ್ಕೆ)

## ಎಸ್ಸೆಸ್ ಆರೋಗ್ಯ ವಿಚಾರಿಸಿದ ಹರಳಕಟ್ಟೆ ಸ್ವಾಮೀಜಿ



ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಮಾಜದ ಹಿರಿಯರಾದ ಶಾಮನೂರು ಶಿವಶಂಕರಪ್ಪ ಅವರನ್ನು ತರಳಬಾಳು ಜಗದ್ಗುರು ಶಾಖಾಮಠ ಹರಳಕಟ್ಟೆಯ ಶ್ರೀ ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ ಸೋಮವಾರ ಭೇಟಿ ಮಾಡಿ ಆರೋಗ್ಯವನ್ನು ವಿಚಾರಿಸಿದರು.

# ಜ.5ರಂದು ರಾಜ್ಯಮಟ್ಟದ ಯುವಜನೋತ್ಸವ

### ಎಂಬಿಎ ಮೈದಾನದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಉದ್ಘಾಟನೆ: ಜಿಲ್ಲಾಧಿಕಾರಿ ಗಂಗಾಧರಸ್ವಾಮಿ

ದಾವಣಗೆರೆ, ಡಿ.30- ಇದೇ ಜ.5 ಹಾಗೂ 6 ರಂದು ರಾಜ್ಯ ಮಟ್ಟದ ಯುವ ಜನೋತ್ಸವವನ್ನು ಅದ್ಧೂರಿಯಾಗಿ ನಡೆಸಲು ತೀರ್ಮಾನಿಸಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಹೇಳಿದ್ದಾರೆ.

ಸೋಮವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಈ ಕುರಿತು ಮಾಹಿತಿ ನೀಡಿದ ಅವರು, ಜನವರಿ 5ರಂದು ಎಂ.ಬಿ.ಎ ಮೈದಾನದ ಮುಖ್ಯ ವೇದಿಕೆಯಲ್ಲಿ ಮುಖ್ಯ ಮಂತ್ರಿ ಸಿದ್ಧರಾಮಯ್ಯ ಅವರು ಯುವಜನೋತ್ಸವ ಉದ್ಘಾಟಿಸಲಿದ್ದಾರೆ ಎಂದು ತಿಳಿಸಿದರು.

ಯುವಜನೋತ್ಸವದ ಉದ್ಘಾಟನಾ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಸೇರಿದಂತೆ, ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಸೇರಿದಂತೆ ಜನಪ್ರತಿನಿಧಿಗಳು ಮತ್ತು ಯುವ ಪ್ರಶಸ್ತಿ ಪುರಸ್ಕೃತರು ಭಾಗವಹಿಸಲಿದ್ದಾರೆ. 10 ಸಾವಿರಕ್ಕೂ ಹೆಚ್ಚು ಜನರು ಭಾಗಿಯಾಗುವ ಈ ಸಮಾರಂಭಕ್ಕೆ ಎಲ್ಲಾ ಅಗತ್ಯ ಸಿದ್ಧತೆಗಳು ನಡೆಯುತ್ತಿವೆ ಎಂದರು.

ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಏಳು ಸ್ಪರ್ಧೆಗಳಲ್ಲಿ ಭಾಗವಹಿಸಲು ಯುವ ಸ್ಪರ್ಧಾಳು ಗಳು ಆಗಮಿಸಲಿದ್ದಾರೆ. ಇಲ್ಲಿನ ಸ್ಪರ್ಧೆಯಲ್ಲಿ ವಿಜೇತರಾಗುವವರಿಗೆ ಮೊದಲ ಬಹುಮಾನ ವಾಗಿ 25000 ರೂ., ದ್ವಿತೀಯ 15000 ರೂ. ಮತ್ತು ತೃತೀಯ ಬಹುಮಾನವಾಗಿ 10000 ರೂ. ಗಳನ್ನು ಪ್ರಶಸ್ತಿ ಪತ್ರದೊಂದಿಗೆ ನೀಡಲಾಗುತ್ತದೆ. ಇಲ್ಲಿ ವಿಜೇತರಾದವರು ಜನವರಿ 11 ಮತ್ತು 12 ರಂದು ದೆಹಲಿಯಲ್ಲಿ ನಡೆಯಲಿರುವ ರಾಷ್ಟ್ರೀಯ ಯುವಜನೋತ್ಸವ ದಲ್ಲಿ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು. ಜ.5 ರಂದು (2ನೇ ಪುಟಕ್ಕೆ)



### 7 ವೇದಿಕೆಗಳು, 7 ಸ್ಪರ್ಧೆಗಳು

**ರಾಜ್ಯ ಮಟ್ಟದ ಯುವಜನೋತ್ಸವಕ್ಕೆ 7 ವೇದಿಕೆಗಳನ್ನು ಸಿದ್ಧಪಡಿಸಲಾಗಿದೆ. ಪ್ರತ್ಯೇಕ ವೇದಿಕೆಗಳಲ್ಲಿ 7 ಸ್ಪರ್ಧೆಗಳಿದ್ದು ಪ್ರತ್ಯೇಕವಾಗಿ ನಡೆಯಲಿವೆ. ಜಾನಪದ ನೃತ್ಯ ಸ್ಪರ್ಧೆಯು ಬಿಐಇಟಿ ಕಾಲೇಜಿನ ಎಸ್.ಎಸ್.ಎಂ. ಸಾಂಸ್ಕೃತಿಕ ಸಭಾಂಗಣ, ಜಾನಪದ ಗೀತೆ ಸ್ಪರ್ಧೆಯು ಬಾಪೂಜಿ ಎಂಬಿಎ ಕಾಲೇಜು ಸಭಾಂಗಣ, ವಿಜ್ಞಾನ ವಸ್ತು ಪ್ರದರ್ಶನ ಎಂಬಿಎ ಮೈದಾನದಲ್ಲಿನ ಎಸ್.ಎಸ್. ಪಬ್ಲಿಕ್ ಸ್ಕೂಲ್, ಕವನ ರಚನೆ ಎಂಬಿಎ ಕಾಲೇಜಿನ ಕೊಠಡಿ 1, ಕಥೆ ಬರೆಯುವುದು ಇಲ್ಲಿನ ಕೊಠಡಿ 2 ರಲ್ಲಿ ಹಾಗೂ ಚಿತ್ರಕಲೆ ಸ್ಪರ್ಧೆ ಮತ್ತು ಭಾಷಣ ಸ್ಪರ್ಧೆಯು ಲಲಿತ ಕಲಾ ಮಹಾವಿದ್ಯಾಲಯದಲ್ಲಿ ನಡೆಯಲಿವೆ.**

### ಕದ್ರಿ ಮಣಿಕಂಠ ಮತ್ತು ತಂಡದಿಂದ ಸಾಂಸ್ಕೃತಿಕ ಸಂಜೆ

**ಯುವಜನೋತ್ಸವದ ಅಂಗವಾಗಿ ಖ್ಯಾತ ಕಲಾವಿದ ಕದ್ರಿ ಮಣಿಕಂಠ ಮತ್ತು ತಂಡದವರಿಂದ ಜನವರಿ 5 ರ ಸಂಜೆ 5 ಗಂಟೆಯಿಂದ ಪ್ರಧಾನ ವೇದಿಕೆ ಎಂಬಿಎ ಮೈದಾನದಲ್ಲಿ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ವೇದಿಕೆಯಲ್ಲಿ ಐದು ಸಾವಿರಕ್ಕಿಂತಲೂ ಹೆಚ್ಚು ಆಸನದ ವ್ಯವಸ್ಥೆ ಮಾಡಲಾಗಿದ್ದು , ಸುಮಾರು 10 ಸಾವಿರಕ್ಕೂ ಹೆಚ್ಚಿನ ಜನರು ಸೇರುವ ನಿರೀಕ್ಷೆ ಹೊಂದಲಾಗಿದೆ.**

**ಗ್ಲಾಸ್‌ಹೌಸ್‌ನಲ್ಲಿ ಫಲಪುಷ್ಪ ಪ್ರದರ್ಶನ ಭಾನುವಾರ ದಿಂದ ನಡೆಯುತ್ತಿದ್ದು ಜನವರಿ 5 ರವರೆಗೆ ಯುವ ಜನೋತ್ಸವ ಹಿನ್ನೆಲೆಯಲ್ಲಿ ಮುಂದುವರೆಸಲಾಗಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.**

### ಉಚಿತ ಬಸ್ ಸೇವೆ

**ಜನವರಿ 5 ಮತ್ತು 6 ರಂದು ನಡೆಯುವ ಯುವಜನೋತ್ಸವ ವೀಕ್ಷಣೆಗಾಗಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲು ಕೆಎಸ್‌ಆರ್‌ಟಿಸಿ ಯಿಂದ 4 ಬಸ್‌ಗಳ ವ್ಯವಸ್ಥೆ ಕಲ್ಪಿಸಲಾಗಿದೆ.**

**ಈ ಬಸ್‌ಗಳು ಎಲ್ಲಾ ವೇದಿಕೆಗಳಿಗೂ ಸಂಚರಿಸುತ್ತವೆ. ಸಾರ್ವಜನಿರು ಉಚಿತವಾಗಿ ಸಂಚರಿಸಬಹುದು ಎಂದು ಜಿಲ್ಲಾಧಿಕಾರಿ ತಿಳಿಸಿದರು.**

# ಮಹಾ ಕುಂಭಮೇಳಕ್ಕಾಗಿ 1.60 ಲಕ್ಷ ಟೆಂಟ್

### 1250 ಕಿ.ಮೀ. ನೀರಿನ ಪೈಪ್‌ಲೈನ್, 1.50 ಲಕ್ಷ ಶೌಚಾಲಯ



ನವದೆಹಲಿ, ಡಿ. 30- ಉತ್ತರ ಪ್ರದೇಶದಲ್ಲಿ ನಡೆಯಲಿರುವ ಕುಂಭಮೇಳ ವಿಶ್ವದಲ್ಲೇ ಅತಿದೊಡ್ಡ ಧಾರ್ಮಿಕ ಸಮಾವೇಶ ಎಂದು ಬಣ್ಣಿತವಾಗಿದೆ. ಈ ಕುಂಭಮೇಳಕ್ಕಾಗಿ ಆಡಳಿತ ಕಳೆದ 2 ತಿಂಗಳಿಂದ ನದಿಗಳು, ರಸ್ತೆ ಹಾಗೂ ನದಿ ತಟಗಳ ಕಾಮಗಾರಿಗಳಲ್ಲಿ ತೊಡಗಿದೆ.

ಭಾನುವಾರ ಮಾಸಿಕ ಮನ್ ಕಿ ಬಾತ್ ರೇಡಿಯೋ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿ, ಕುಂಭಮೇಳ ವನ್ನು ಐಕ್ಯತೆಯ ಮೇಳ ಎಂದು ಬಣ್ಣಿಸಿದ್ದರು.

ಸಮಾಜದಿಂದ ದ್ವೇಷ ಹಾಗೂ ವಿಭಜನೆಯನ್ನು ತೊಡೆದು ಹಾಕಲು ಕುಂಭಮೇಳದಲ್ಲಿ ಪಾಲ್ಗೊಂಡ ಜನ ಪಣ ತೊಡಬೇಕು. ಇಡೀ ದೇಶ ಒಂದೇ ಎಂಬ ಸಂದೇಶ ನೀಡಬೇಕು. ಕುಂಭಮೇಳ ಬೃಹತ್ ಆಗಿರುವ ಜೊತೆಗೆ ವೈವಿಧ್ಯತೆಯಿಂದಲೂ ಕೂಡಿದೆ ಎಂದು ಪ್ರಧಾನಿ ತಿಳಿಸಿದ್ದರು.

12 ವರ್ಷಗಳಿಗೊಮ್ಮೆ ನಡೆಯುವ ಮಹಾಕುಂಭಮೇಳ ಈ ಬಾರಿ ಪ್ರಯಾಗರಾಜ್‌ನಲ್ಲಿ ನಡೆಯಲಿದೆ. ಜನವರಿ 13ರಂದು ಕುಂಭಮೇಳ ಆರಂಭವಾಗಲಿದ್ದು, 45 ದಿನಗಳ ನಂತರ ಫೆಬ್ರವರಿ 26ರ ಮಹಾಶಿವರಾತ್ರಿ ದಿನದಂದು ಪೂರ್ಣಗೊಳ್ಳಲಿದೆ.

ಸಂಗಮದಲ್ಲಿ ಗಂಗಾ ನದಿಯ ತಟದಲ್ಲಿ ಲಕ್ಷಾಂತರ ಯಾತ್ರಿಗಳು ಸೇರುತ್ತಾರೆ. ಈ ವರ್ಷದ ಮಹಾ ಕುಂಭ ಮೇಳದಲ್ಲಿ ದಾಖಲೆಯ 40 ಕೋಟಿ ಭಕ್ತರು ಆಗಮಿಸುವ ನಿರೀಕ್ಷೆ ಇದೆ ಎಂದು ಉತ್ತರ ಪ್ರದೇಶ ಸರ್ಕಾರ ಅಂದಾಜಿಸಿದೆ.


ಮಹಾ ಕುಂಭಮೇಳಕ್ಕಾಗಿ ಸರ್ಕಾರ ಬೃಹತ್ ಪ್ರಮಾಣದಲ್ಲಿ ಯೋಜನೆ ಹಾಗೂ ಸಿದ್ಧತೆ ನಡೆಸಿದೆ.

ಮೇಳಕ್ಕಾಗಿ 1.60 ಲಕ್ಷ ಟೆಂಟ್‌ಗಳು, 1.50 ಲಕ್ಷ ಶೌಚಾಲಯಗಳು, 1,250 ಕಿ.ಮೀ. ನೀರಿನ ಪೈಪ್‌ಲೈನ್, 67 ಸಾವಿರ ಎಲ್‌ಇಡಿ ದೀಪಗಳನ್ನು ಅಳವಡಿಸಲಾಗುತ್ತಿದೆ. ಇದರಿಂದಾಗಿ ಕುಂಭ ಮೇಳ ನಡೆಯುವ ಇಡೀ ಪ್ರದೇಶ ಹೊಸ ರೂಪ ಪಡೆದುಕೊಂಡಿದೆ.

ಆದರೆ ಬೃಹತ್ ಮೇಳದ ಸಿದ್ಧತೆ ತನ್ನದೇ ಆದ ಸವಾಲುಗಳನ್ನು ಹೊಂದಿದೆ. ಗಂಗಾನದಿಯ ದಂಡೆಗಳು ನೀರಿನ ಹೊಡೆತಕ್ಕೆ ಸಿಲುಕಿ ಕರಗಿವೆ. ಇದರಿಂದಾಗಿ ನದಿ ಮೂಲ (4ನೇ ಪುಟಕ್ಕೆ)

## ಚಂದ್ರಬಾಬು ನಾಯ್ಡು ದೇಶದ ಅತ್ಯಂತ ಶ್ರೀಮಂತ ಸಿಎಂ

ನವದೆಹಲಿ, ಡಿ. 30 - ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು 931 ಕೋಟಿ ರೂ.ಗಳ ಆಸ್ತಿ ಹೊಂದಿದ್ದು ಅವರು ದೇಶದ ಅತ್ಯಂತ ಶ್ರೀಮಂತ ಮುಖ್ಯಮಂತ್ರಿ ಆಗಿದ್ದಾರೆ.



ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ತಮ್ಮ ಆಸ್ತಿ ಮೌಲ್ಯ 15 ಲಕ್ಷ ರೂ. ಎಂದು ಘೋಷಿಸಿ ಕೊಂಡಿದ್ದು, ಅವರು ದೇಶದ ಅತಿ ಕಡಿಮೆ ಆಸ್ತಿ ಹೊಂದಿರುವ ಮುಖ್ಯಮಂತ್ರಿ ಆಗಿದ್ದಾರೆ.

ಅಸೋಸಿಯೇಷನ್ ಫಾರ್ ಡೆಮಾಕ್ರೆಟಿಕ್ ರಿಫಾರ್ಮ್ಸ್ ಸಂಸ್ಥೆಯು ಈ ಕುರಿತು ಮಾಹಿತಿ ಬಿಡುಗಡೆ ಮಾಡಿದೆ. ದೇಶದ ಮುಖ್ಯಮಂತ್ರಿಗಳ ಒಟ್ಟು ಸರಾಸರಿ ಆಸ್ತಿ ಮೌಲ್ಯ 52.59 ಕೋಟಿ ರೂ. (4ನೇ ಪುಟಕ್ಕೆ)







25ನೇ ವರ್ಷದ ಬೆಳ್ಳಿ ಮಹೋತ್ಸವ

ವಿವಾಹ ಮಹೋತ್ಸವ



ದಿನಾಂಕ 31.12.2024ರಂದು ತಮ್ಮ ವಿವಾಹ ಮಹೋತ್ಸವದ
25ನೇ ವರ್ಷದ ಬೆಳ್ಳಿ ಮಹೋತ್ಸವದ ಸಂಭ್ರಮದಲ್ಲಿರುವ
ಶ್ರೀ ತಿಪ್ಪೇಸ್ವಾಮಿ ಹೆಚ್. (ಮಾನಸ)
(ದಿ. ಬೈರಜ್ಜರ ಹನುಮಂತಪ್ಪ ಮತ್ತು ದಿ. ಶ್ರೀಮತಿ ಬೈರಜ್ಜರ ದುರ್ಗಮ್ಮ ಇವರ ಪುತ್ರ)
ಮತ್ತು ಶ್ರೀಮತಿ ಎಂ. ನೇತ್ರಾವತಿ
ದಂಪತಿಗೆ ಹಾರ್ದಿಕ ಶುಭಾಶಯಗಳು.
♦ ಶ್ರೀಮತಿ ಹೆಚ್. ಮಧುರಾಕ್ಷಿ ♦ ಬೈರಜ್ಜರ ಹೆಚ್. ನಾಗರಾಜ್
♦ ಎನ್. ಮಾನಸ ♦ ಕಾರ್ತಿಕ್ ಕೆ. ಜವಳಿ
♦ ಎನ್. ಅನುಷಾ ♦ ಡಾ. ರೋಹಿತ್ ಕುಮಾರ್ ಡಿ.ಎ,
♦ ಕಾವ್ಯ ♦ ಸತೀಶ್ ಎಂ.
♦ ಎನ್. ಮನೋಜ್ ♦ ಟಿ. ಪ್ರಜ್ವಲ್ ♦ ಟಿ. ಪ್ರಮೋದ್
ಅಗಸ್ತ್ಯ ಕೆ.ಜವಳಿ, ರೋಹನ್ ಡಿ.ಆರ್.
ಹಾಗೂ ಅಕ್ಕ-ತಂಗಿಯರು, ಭಾವ, ಭಾವ ಮೈದುನರು
ಬೈರಜ್ಜರ ವಂಶಸ್ಥರು ಹಾಗೂ ಬಂಧು-ಮಿತ್ರರು.



# 11ರಿಂದ ಜಗಳೂರಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನ

## ಆಹ್ವಾನ ಪತ್ರಿಕೆ ಅನಾವರಣಗೊಳಿಸಿದ ಬಿ.ದೇವೇಂದ್ರಪ್ಪ, ಡಾ.ಎ.ಬಿ. ರಾಮಚಂದ್ರಪ್ಪ

## ಜ.2ರಂದು ಸಮ್ಮೇಳನ 'ಜಾಗೃತಿ ರಥ ಯಾತ್ರೆ', 13ರಂದು ಜಗಳೂರು 'ಜಲೋತ್ಸವ'



ಜಗಳೂರು, ಡಿ.30- ಪಟ್ಟಣದಲ್ಲಿ ಇದೇ ಜನವರಿ 11 ಮತ್ತು 12 ರಂದು ನಡೆಯಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಆಹ್ವಾನ ಪತ್ರಿಕೆಯನ್ನು ಶಾಸಕ ಬಿ. ದೇವೇಂದ್ರಪ್ಪ, ಸಮ್ಮೇಳನದ ಸರ್ವಾಧ್ಯಕ್ಷ ಡಾ.ಎ.ಬಿ ರಾಮಚಂದ್ರಪ್ಪ, ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅವರು ಪಟ್ಟಣದ ಶಾಸಕರ ಜನ ಸಂಪರ್ಕ ಕಚೇರಿಯಲ್ಲಿ ಅನಾವರಣಗೊಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಬಿ. ದೇವೇಂದ್ರಪ್ಪ ಅವರು, ಮೂರು ದಶಕಗಳ ನಂತರ ತಾಲ್ಲೂಕಿನಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ಸಂತಸದ ವಿಷಯ, ಎಲ್ಲರೂ ಒಂದಾಗಿ ಸಮ್ಮೇಳನ ಯಶಸ್ಸಿಗೆ ಶ್ರಮಿಸಬೇಕು ಎಂದು ಮನವಿ ಮಾಡಿದರು.

ಕನ್ನಡ ತಾಯಿ ಭುವನೇಶ್ವರಿಯ ತೇರು ಎಳೆಯಲು ಎಲ್ಲರೂ ಒಂದಾಗಿ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಸಣ್ಣಪುಟ್ಟ ಏನೇ ಸಮಸ್ಯೆಗಳಿದ್ದರೂ ಅವುಗಳನ್ನು ಬದಿಗೊತ್ತಿ ಸಮ್ಮೇಳನದ ಯಶಸ್ವಿಗೆ ಶ್ರಮಿಸಬೇಕು. ಸಮ್ಮೇಳನದ ಪ್ರತಿಯೊಂದು ಜವಾಬ್ದಾರಿಗಳನ್ನು ಆಯಾ ಸಮಿತಿಗಳು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ಸಲಹೆ ನೀಡಿದರು.

**ಜಗಳೂರು ಜಲೋತ್ಸವ :** ಸಮ್ಮೇಳನದ ಮರುದಿನ ಜ.13ರಂದು ಜಗಳೂರು ಜಲೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. 50 ವರ್ಷಗಳ ನಂತರ ಎಲ್ಲಾ ಕೆರೆ-ಕಟ್ಟೆಗಳಿಂದ ನೀರು ಹರಿದು ಬಂದಿದ್ದು, ಕೆರೆಗಳು ತುಂಬಿ ತುಳುಕುತ್ತಿವೆ ತಾಲ್ಲೂಕನ್ನು ಪ್ರಾಕೃತಿಕವಾಗಿ, ಧಾರ್ಮಿಕವಾಗಿ, ಭೌಗೋಳಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಉನ್ನತ ಸ್ಥಾನಕ್ಕೆ ಕೊಂಡೊಯ್ಯುವ ಕೆಲಸ ಮಾಡಬೇಕಾಗಿದೆ. ಆದ್ದರಿಂದ ತಾಲ್ಲೂಕಿನ ಐತಿಹಾಸಿಕ ಮತ್ತು ಭೌಗೋಳಿಕ ಹಿನ್ನೆಲೆಯ ಸಾಕ್ಷ್ಯ ಚಿತ್ರ ಸಿದ್ಧಪಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ಜಿಲ್ಲಾ ಕಸಾಪ್ಪ ಅಧ್ಯಕ್ಷ ಬಿ ವಾಮದೇವಪ್ಪ ಮಾತನಾಡಿ, ಸಮ್ಮೇಳನದ ಪೂರ್ವಸಿದ್ಧತೆ ಅತಿಥಿಗಳ ಸನ್ಮಾನ ವೇದಿಕೆ ನಿರ್ಮಾಣ ಮತ್ತು ಆರ್ಥಿಕ ವೆಚ್ಚದ ಬಗ್ಗೆ ಶಾಸಕರಿಗೆ ಸಮಗ್ರ ಮಾಹಿತಿ ನೀಡಿದರು.

ಸಭೆಯಲ್ಲಿ ಸಮ್ಮೇಳನದ ಸರ್ವಾಧ್ಯಕ್ಷ ಡಾ.ಎ.ಬಿ ರಾಮಚಂದ್ರಪ್ಪ, ಜಿಲ್ಲಾ ಕಸಾಪ ಕಾರ್ಯದರ್ಶಿ ಜಿಗಳಿ ಪ್ರಕಾಶ್, ಮತ್ತು ಪಧಾದಿಕಾರಿಗಳು, ಸಾಹಿತಿ ಎನ್. ಟಿ. ಎರ್ರಿಸ್ವಾಮಿ, ತಾ. ಕಸಾಪ ಅಧ್ಯಕ್ಷೆ ಸುಜಾತಮ್ಮ, ಗೌರವ ಕಾರ್ಯದರ್ಶಿ ಗೀತಾ ಮಂಜು, ಪದಾಧಿಕಾರಿಗಳಾದ ಡಿ.ಸಿ ಮಲ್ಲಿಕಾರ್ಜುನ್, ಮಾರ ನಾಯಕ್, ಕೃಷ್ಣಮೂರ್ತಿ, ನಾಗಲಿಂಗಪ್ಪ, ಮುಖಂಡರಾದ ಹಟ್ಟಿ ತಿಪ್ಪೇಸ್ವಾಮಿ, ಪ.ಪಂ ಮಾಜಿ ಅಧ್ಯಕ್ಷ ಮಂಜುನಾಥ್, ಡಿ. ಶ್ರೀನಿವಾಸ್, ಜಗದೀಶ್, ಬಿ. ಮಹೇಶ್ವರಪ್ಪ ಇತರರು ಇದ್ದರು.

### ಸಮ್ಮೇಳನ ಜಾಗೃತಿ ಯಾತ್ರೆ..!

**ಜಿಲ್ಲಾ ಸಾಹಿತ್ಯ ಸಮ್ಮೇಳನದ ಜಾಗೃತಿಗಾಗಿ ಅದ್ದೂರಿಯಾಗಿ ರಥ ನಿರ್ಮಾಣವಾಗಿದ್ದು, ಜ.2ರಂದು ತಹಶೀಲ್ದಾರ್ ಕಚೇರಿ ಆವರಣದಲ್ಲಿರುವ ಕುವೆಂಪು ಪುತ್ಥಳಿಗೆ ಪೂಜೆ ಸಲ್ಲಿಸಿದ ನಂತರ ಸಮ್ಮೇಳನದ ಜಾಗೃತಿ ರಥಯಾತ್ರೆ ಆರಂಭವಾಗಲಿದೆ. ರಥವು ತಾಲ್ಲೂಕಿನ 22 ಗ್ರಾಮ ಪಂಚಾಯಿತಿಗಳ ಎಲ್ಲಾ ಗ್ರಾಮಗಳಿಗೂ ಸಂಚರಿಸಲಿದೆ. ಶಾಸಕ ಬಿ. ದೇವೇಂದ್ರಪ್ಪ, ಸರ್ವಾಧ್ಯಕ್ಷ ಎ.ಬಿ ರಾಮಚಂದ್ರಪ್ಪ, ಬಿ. ವಾಮದೇವಪ್ಪ ಚಾಲನೆ ನೀಡಲಿದ್ದಾರೆ.**

# ಜ.5ರಂದು ಯುವಜನೋತ್ಸವ

**(1ನೇ ಪುಟದಿಂದ)** ಬೆಳಗ್ಗೆ 9 ಗಂಟೆಯಿಂದ ವಿವಿಧ ಕಲಾತಂಡಗಳೊಂದಿಗೆ ಹಾಗೂ ಶಾಲಾ, ಕಾಲೇಜು ವಿದ್ಯಾರ್ಥಿಗಳೊಂದಿಗೆ ಜನಪದ ಮೆರವಣಿಗೆ ಮೂಲಕ ಎಂಬಿಎ ಮೈದಾನಕ್ಕೆ ತೆರಳಿ ಉದ್ಘಾಟನೆಯಲ್ಲಿ ಭಾಗಿಯಾಗಲಿದ್ದಾರೆ. ಕಲಾಮೇಳದಲ್ಲಿ ದಕ್ಷಿಣ ವಲಯದ ಸಾಂಸ್ಕೃತಿಕ ಕೇಂದ್ರದಿಂದ 10 ಕ್ಕಿಂತ ಹೆಚ್ಚು ತಂಡಗಳು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 10 ಕ್ಕೂ ಹೆಚ್ಚು ಕಲಾ ತಂಡಗಳು ಸೇರಿದಂತೆ ವಿವಿಧ ಕಾಲೇಜುಗಳು ವಿದ್ಯಾರ್ಥಿಗಳ ತಂಡಗಳು ಕಲಾ ಮೇಳದಲ್ಲಿ ಭಾಗಿಯಾಗಲಿದ್ದು ಆಕರ್ಷಕ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೆ ಊಟದ ವ್ಯವಸ್ಥೆ, ಕುಡಿಯುವ ನೀರು ಸೇರಿದಂತೆ ಸೂಕ್ತ ಬಂದೋಬಸ್ತ್ ಕಲ್ಪಿಸಲಾಗುತ್ತಿದೆ. ವಿವಿಧ ಜಿಲ್ಲೆಗಳಿಂದ ಆಗಮಿಸುವ ಯುವ ಸ್ಪರ್ಧಾಳುಗಳಿಗೆ ಊಟ, ವಸತಿ ಸೇರಿದಂತೆ ಜಿಲ್ಲೆಯಲ್ಲಿನ ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸ ಹಮ್ಮಿಕೊಳ್ಳಲು ಸೂಕ್ತ ವಾಹನಗಳ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಸ್ಪರ್ಧಾಳುಗಳ ರಾತ್ರಿ ಊಟಕ್ಕೆ ಮಾಂಸಾಹಾರವನ್ನೂ ನೀಡಲು ತೀರ್ಮಾನಿಸಲಾಗಿದೆ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ವಿಜಯಕುಮಾರ್ ಎಂ.ಸಂತೋಷ್, ಪಾಲಿಕೆ ಆಯುಕ್ತೆ ರೇಣುಕಾ ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಹರಪನಹಳ್ಳಿ ತಾ. ಕೃಷಿಕ ಸಮಾಜದ ಅಧ್ಯಕ್ಷರಾಗಿ ಎಸ್.ಮಡಿವಾಳಪ್ಪ



ಹರಪನಹಳ್ಳಿ, ಡಿ. 30- ಹರಪನಹಳ್ಳಿ ತಾಲ್ಲೂಕು ಕೃಷಿಕ ಸಮಾಜದ ನೂತನ ಅಧ್ಯಕ್ಷರಾಗಿ ನೀಲಗುಂದದ ಎಸ್.ಮಡಿವಾಳಪ್ಪ ಹಾಗೂ ಉಪಾಧ್ಯಕ್ಷರಾಗಿ ಶಿಂಗ್ರಿಹಳ್ಳಿ ಸಿ.ವಿಜಯ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಟ್ಟಣದ ಕೃಷಿ ಇಲಾಖೆಯಲ್ಲಿ ಸೋಮವಾರ ನಡೆದ ಚುನಾವಣೆಯಲ್ಲಿ ತಾಲ್ಲೂಕು ಕೃಷಿಕ ಸಮಾಜಕ್ಕೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಸಹಾಯಕ ಕೃಷಿ ನಿರ್ದೇಶಕ ಉಮೇಶ್ ತಿಳಿಸಿದ್ದಾರೆ.

ತಾಲ್ಲೂಕು ಕೃಷಿಕ ಸಮಾಜದ ಎಲ್ಲಾ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಪ್ರಧಾನ ಕಾರ್ಯದರ್ಶಿಯಾಗಿ ಕ್ಯಾರಕಟ್ಟಿ ಕೆ.ಜಿ.ಶಿವಯೋಗಿ, ಖಜಾಂಚಿಯಾಗಿ ಶಿವಪುರದ ಜೆ.ಆರ್.ರವಿನಾಯ್ಕ್ ಹಾಗೂ ಜಿಲ್ಲಾ ಪ್ರತಿನಿಧಿಯಾಗಿ ರಾಗಿಮಸಲವಾಡದ ಕೆ.ರೇವಣಸಿದ್ದಪ್ಪ ಆಯ್ಕೆಯಾಗಿದ್ದಾರೆ ಎಂದು ಘೋಷಿಸಿದರು. ಯರಬಾಳು ಕ್ಷೇತ್ರದ ಪಟೇಲ್ ಗುರುಬಸವರಾಜ ಅವರು ಮಾತ್ರ ಗೈರಾಗಿದ್ದರು ಎಂದು ಉಮೇಶ್ ಹೇಳಿದರು.

ನೂತನ ಅಧ್ಯಕ್ಷ ನೀಲಗುಂದದ ಎಸ್. ಮಡಿವಾಳಪ್ಪ ಮಾತನಾಡಿ, ತಾಲ್ಲೂಕಿನ ಕೃಷಿಕ ಸಮಾಜದ ಪದಾಧಿಕಾರಿಗಳು ರೈತರ ಸಮಸ್ಯೆಗಳಿಗೆ ಸ್ಪಂದಿಸುತ್ತಾರೆ. ಕೃಷಿಕ ಸಮಾಜದ ಕಛೇರಿ ಕಟ್ಟಡಕ್ಕೆ ಭೂಮಿ ಪೂಜೆಯಾಗಿದ್ದು ಕಾಮಗಾರಿ ಪ್ರಾರಂಭ ವಿಳಂಬವಾಗಿದೆ. ಶಾಸಕರೊಂದಿಗೆ ಹಾಗೂ ಅಧಿಕಾರಿಗಳೊಂದಿಗೆ ಸಮಲೋಚನೆ ನಡೆಸಿ ಪೂರ್ಣಗೊಳಿಸಲು ಶ್ರಮಿಸುತ್ತೇನೆ ಎಂದರು.

ಕೃಷಿಕ ಸಮಾಜದ ನೂತನ ಕಾರ್ಯಕಾರಿ ಸಮಿತಿ ಸದಸ್ಯರಾದ ಮಾದಿಹಳ್ಳಿ ಬಕ್ಕೇಶ್ ಪಿ., ತೆಲಗಿ ಆರ್.ನಾಗರಾಜ, ಕುಂಚೂರು ಎ. ಕೊಟ್ರಪ್ಪ, ಜಂಗಂತುಂಬಿಗೆರೆ ಎಂ.ಶಂಕರಾನಂದ, ವಡ್ಡಿನಹಳ್ಳಿ ಡಿ.ಭರಮನಗೌಡ, ಇಟ್ಟಿಗುಡಿ ಹೆಚ್. ಶೇಖರಪ್ಪ, ಶಂಕರನಹಳ್ಳಿ ಎಸ್.ಹೆಚ್. ಆನಂದಪ್ಪ, ರಾಮಘಟ್ಟದ ಎ.ನಾರಪ್ಪ, ಅಣಜಿಗೆರೆ ಕೆ.ನರೇಂದ್ರ ಹಾಗೂ ಬಿಜೆಪಿ ಮುಖಂಡರಾದ ನವೀನ್ ಪಾಟೀಲ್, ಮಹೇಶ ಪೂಜಾರ ಹಾಗೂ ಇತರರು ಹಾಜರಿದ್ದರು.

# 2024ರಲ್ಲಿ ಶೇ. 3ರಷ್ಟು ಕುಸಿದ ರೂಪಾಯಿ, ಮುಂದಿನ ವರ್ಷ ಪರಿಸ್ಥಿತಿ ಸುಧಾರಣೆ ನಿರೀಕ್ಷೆ

**(1ನೇ ಪುಟದಿಂದ)** ಜಪಾನ್ ಯೆನ್ ವಿರುದ್ಧ ರೂಪಾಯಿ ಮೌಲ್ಯ ಹೆಚ್ಚಾಗಿದೆ.

ಇತರೆ ಅಭಿವೃದ್ಧಿಶೀಲ ದೇಶಗಳಿಗೆ ಹೋಲಿಸಿದರೆ ರೂಪಾಯಿಯ ಮೌಲ್ಯದ ಏರಿಳಿತ ಕಡಿಮೆ ಇದೆ ಎಂದು ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ್ ದಾಸ್ ಅವರು ಡಿಸೆಂಬರ್‌ನಲ್ಲಿ ನಡೆದ ದ್ವೈಮಾಸಿಕ ಹಣಕಾಸು ನೀತಿಯ ಸಭೆಯಲ್ಲಿ ತಿಳಿಸಿದ್ದಾರೆ.

ಇಷ್ಟಾದರೂ ಡಾಲರ್ ಎದುರು ರೂಪಾಯಿ ಮೌಲ್ಯ ಸ್ಥಿರಗೊಳಿಸಲು ರಿಸರ್ವ್ ಬ್ಯಾಂಕ್ ಹೆಚ್ಚು ಸಕ್ರಿಯವಾಗಿತ್ತು. ಭಾರತ ತೈಲ ಆಮದಿನ ಮೇಲೆ ಅವಲಂಬಿತವಾಗಿರುವುದು ಹಾಗೂ ವ್ಯಾಪಾರಿ ವಿನಿಮಯ ಕೊರತೆ ಹೆಚ್ಚಾಗಿದ್ದು ರೂಪಾಯಿ ಮೇಲಿನ ಒತ್ತಡಕ್ಕೆ ಕಾರಣವಾಗಿತ್ತು.

ರಿಸರ್ವ್ ಬ್ಯಾಂಕ್ ಮಧ್ಯ ಪ್ರವೇಶದ ಕಾರಣದಿಂದಾಗಿ ಭಾರತದ ವಿನಿಮಯ ಸಂಗ್ರಹ ಸೆಪ್ಟೆಂಬರ್ ತಿಂಗಳಲ್ಲಿ ದಾಖಲೆಯ 704.89 ಶತಕೋಟಿ ಇದ್ದದ್ದು ಡಿಸೆಂಬರ್ 20ರ ವೇಳೆಗೆ 644.39 ಶತಕೋಟಿ ಡಾಲರ್‌ಗೆ ಕುಸಿದಿತ್ತು.

ಚೀನಾದ ಜಿಡಿಪಿ ಬೆಳವಣಿಗೆ ದರ ಶೇ. 4.8ಕ್ಕೆ ಕುಸಿದಿತ್ತು. ಇದರಿಂದಾಗಿ ಭಾರತದ ರಫ್ತು ಬೇಡಿಕೆ ಕಡಿಮೆಯಾಗಿತ್ತು. ಮಧ್ಯಪ್ರಾಚ್ಯದ ಸಂಘರ್ಷದಿಂದಾಗಿ ಸರಕು ಪೂರೈಕೆಯ ಮೇಲೆ ಪರಿಣಾಮವಾಗಿತ್ತು. ಅಲ್ಲದೇ ಕೆಂಪು ಸಮುದ್ರದಲ್ಲಿ ಉಂಟಾದ ಬಿಕ್ಕಟ್ಟು ಭಾರತವಷ್ಟೇ ಅಲ್ಲದೇ ಹಲವು ದೇಶಗಳ ವ್ಯಾಪಾರದ ಮೇಲೆ ಪರಿಣಾಮ ಬೀರಿತ್ತು.



ರಿಸರ್ವ್ ಬ್ಯಾಂಕ್‌ನ ಮಾಹಿತಿಯ ಪ್ರಕಾರ ಜನವರಿ 1ರಂದು 83.19 ರೂ. ಇದ್ದ ಡಾಲರ್, ಡಿಸೆಂಬರ್ 27ರ ವೇಳೆಗೆ 2 ರೂ.ಗಳಷ್ಟು ಏರಿಕೆಯಾಗಿ 85.59 ರೂ.ಗಳಿಗೆ ತಲುಪಿದೆ. ಒಟ್ಟಾರೆ ರೂಪಾಯಿ ಮೌಲ್ಯ ಶೇ. 3ರಷ್ಟು ಕುಸಿದಂತಾಗಿದೆ.

ಅಕ್ಟೋಬರ್ 10ರಂದು ಡಾಲರ್ ಎದುರು ರೂಪಾಯಿ 85 ರೂ.ಗಳ ಗಡಿ ದಾಟಿತ್ತು. ಡಿಸೆಂಬರ್ 27ರಂದು 85.80 ರೂ.ಗಳವರೆಗೂ ತಲುಪಿತ್ತು. ಆದರೆ ಜಪಾನ್‌ನ ಯೆನ್ ವಿರುದ್ಧ ರೂಪಾಯಿ ಮೌಲ್ಯ ಶೇ. 8.7ರ ಏರಿಕೆ ಕಂಡಿದೆ. ಜನವರಿ 1 ರಂದು 100 ಯೆನ್ ಬೆಲೆ 58.99 ರೂ. ಆಗಿತ್ತು. ಡಿಸೆಂಬರ್ 27ರಂದು ಇದು 54.26 ರೂ.ಗಳಿಗೆ ತಲುಪಿತ್ತು. ಇದೇ ರೀತಿ ಯೂರೋ ವಿರುದ್ಧ ರೂಪಾಯಿ ಮೌಲ್ಯ ಶೇ. 5ರ ಏರಿಕೆ ಕಂಡಿದೆ. ಆಗಸ್ಟ್ 27ರಂದು ಯೂರೋ 93.75 ರೂ. ಆಗಿತ್ತು. ಅದು ಡಿಸೆಂಬರ್ 27ರ ವೇಳೆಗೆ 89.11 ರೂ.ಗಳಿಗೆ ತಲುಪಿತ್ತು.

ಅಮೆರಿಕಾದಲ್ಲಿ ಸಮಗ್ರ ಆರ್ಥಿಕತೆಯಲ್ಲಿ ಆಗುತ್ತಿರುವ ಬದಲಾವಣೆಗಳ ಕಾರಣದಿಂದ ರೂಪಾಯಿ ಮೌಲ್ಯ ಗಣನೀಯವಾಗಿ ಹೆಚ್ಚಾಗಿದೆ. ಅಮೆರಿಕಾದ ಕೇಂದ್ರ ಬ್ಯಾಂಕ್ ಹಣಕಾಸು ನೀತಿಯನ್ನು ಸಡಿಲಿಸಲು ನಿಧಾನವಾಗಿ ಕ್ರಮ ತೆಗೆದುಕೊಳ್ಳುತ್ತಿದೆ. ಇದರ ಜೊತೆಗೆ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಗಳೂ ಡಾಲರ್ ಮೇಲೆ ಪರಿಣಾಮ ಬೀರಿವೆ.

ಚೀನಾ ಸೇರಿದಂತೆ ಹಲವು ದೇಶಗಳಿಂದ ಮಾಡಿಕೊಳ್ಳಲಾಗುವ ಆಮದಿನ ಮೇಲೆ ತೆರಿಗೆ ಹೆಚ್ಚಿಸಲಾಗುವುದು ಎಂದು ಅಮೆರಿಕಾದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಇದು ಡಾಲರ್ ಮೌಲ್ಯ ಹೆಚ್ಚಾಗಲು ಕಾರಣವಾಗಿದೆ. ಭಾರತದ ಷೇರುಪೇಟೆಯಿಂದಲೂ ದೊಡ್ಡ ಪ್ರಮಾಣದಲ್ಲಿ ವಿದೇಶಿ ಹೂಡಿಕೆಯನ್ನು ವಾಪಾಸ್ ಪಡೆಯಲಾಗುತ್ತಿದೆ. ಅಮೆರಿಕಾದ ಷೇರು ಬೆಲೆಗಳು ತೀವ್ರ ಏರಿಕೆಯಾಗುತ್ತಿರುವುದು ಇದಕ್ಕೆಲ್ಲ ಪ್ರಮುಖ ಕಾರಣ. ಅಮೆರಿಕಾದ ಆರ್ಥಿಕತೆ ಚೇತರಿಸಿಕೊಳ್ಳುತ್ತಿದೆ. ಈ ನಡುವೆಯೇ ಯೂರೋಪ್ ದುರ್ಬಲವಾಗುತ್ತಿದೆ. ಹಾಗೂ ಹಲವು ದೇಶಗಳ ಭೂ ರಾಜಕೀಯ ಪರಿಸ್ಥಿತಿ ಹದಗೆಟ್ಟಿದೆ. ಇದೆಲ್ಲವೂ ಡಾಲರ್ ಬೆಲೆ ಏರಿಕೆಯಾಗಲು ಕಾರಣವಾಗಿದೆ ಎಂದು ಮಿರೇ ಅಸೆಟ್ ಶೇರ್‌ಖಾನ್ ಸಂಶೋಧಕ ವಿಶ್ಲೇಷಕ ಅನುಜ್ ಚೌಧರಿ ಹೇಳಿದ್ದಾರೆ.

ಆದರೂ ಮುಂದಿನ ವರ್ಷ ರೂಪಾಯಿ ಬಹುತೇಕ ಸ್ಥಿರವಾಗುವ ಸಾಧ್ಯತೆ ಇದೆ. 2025ರಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ 82 ರಿಂದ 87 ರೂ.ಗಳ ನಡುವೆ ಇರಲಿದೆ ಎಂದು ರಿಲಿಜಿಯರ್ ಬ್ರೋಕಿಂಗ್‌ನ ಅಜಿತ್ ಮಿಶ್ರಾ ಹೇಳಿದ್ದಾರೆ.

ಅಮೆರಿಕಾದ ಕೇಂದ್ರ ಬ್ಯಾಂಕ್ ತೆಗೆದುಕೊಳ್ಳುವ ಕ್ರಮಗಳು ಹಾಗೂ ಅಮೆರಿಕಾದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ತೆಗೆದುಕೊಳ್ಳುವ ನಿರ್ಧಾರಗಳು ಭಾರತ ಸೇರಿದಂತೆ ಹಲವು ದೇಶಗಳ ಆರ್ಥಿಕತೆಗಳ ಮೇಲೆ ಪರಿಣಾಮ ಬೀರಲಿವೆ.

ಟ್ರಂಪ್ ಅಮೆರಿಕಾದ ಆರ್ಥಿಕತೆ ಬಗ್ಗೆ ರಕ್ಷಣಾತ್ಮಕ ನೀತಿಗಳನ್ನು ಅನುಸರಿಸಿದರೆ ಜಾಗತಿಕ ವ್ಯಾಪಾರ ಹಾಗೂ ಬಂಡವಾಳದ ಮೇಲೆ ಪರಿಣಾಮವಾಗಲಿದೆ. ಇದು ಆಸ್ತಿ ಮೌಲ್ಯಗಳು ಹಾಗೂ ಷೇರುಪೇಟೆಗಳ ಮೇಲೆ ಪರಿಣಾಮ ಬೀರಲಿದೆ ಎಂದು ಆರ್ಥಿಕ ಪರಿಣಿತರು ಹೇಳಿದ್ದಾರೆ.

ಭಾರತದ ರಿಸರ್ವ್ ಬ್ಯಾಂಕ್ ಸಹ ಹಣದುಬ್ಬರ ನಿಯಂತ್ರಣದಲ್ಲಿಡುವ ಹಾಗೂ ಬೆಳವಣಿಗೆಗೆ ಉತ್ತೇಜನ ನೀಡುವ ಸಮತೋಲದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಿದೆ. ಕೇಂದ್ರ ಸರ್ಕಾರ ಮುಂದಿನ ಬಜೆಟ್‌ನಲ್ಲಿ ರೂಪಿಸುವ ಆರ್ಥಿಕ ನೀತಿಗಳೂ ಸಹ ಮಾರುಕಟ್ಟೆಯ ಮೇಲೆ ಪರಿಣಾಮ ಬೀರಲಿವೆ.



# ಗ್ರಾಮೀಣ ಮಟ್ಟದಲ್ಲಿ ಕಾನೂನಿನ ಅರಿವು ಅತ್ಯಗತ್ಯ

ಹರಪನಹಳ್ಳಿ, ಡಿ. 30 - ಮನುಷ್ಯ ಹುಟ್ಟಿನಿಂದ ಸಾಯುವವರೆಗೂ ಕಾನೂನಿನ ಚೌಕಟ್ಟಿನ ಅಡಿಯಲ್ಲಿ ಹೋದಾಗ ಮಾತ್ರ ಉತ್ತಮ ಜೀವನ ನಿರ್ವಹಣೆ ಮಾಡಲು ಸಾಧ್ಯವಾಗುತ್ತದೆ ಎಂದು ವಕೀಲರ ಸಂಘದ ಅಧ್ಯಕ್ಷ ಟಿ. ವೆಂಕಟೇಶ್ ಹೇಳಿದರು.

**ಹರಪನಹಳ್ಳಿ ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಟಿ. ವೆಂಕಟೇಶ್**

ತಾಲ್ಲೂಕಿನ ಮಾಡಲಗೇರಿ ಗ್ರಾಮದ ಗ್ರಾಮ ಪಂಚಾಯತಿ ಕಚೇರಿಯಲ್ಲಿ ತಾಲ್ಲೂಕು ವಕೀಲರ ಸಂಘ, ಕಾನೂನು ಸೇವಾ ಸಮಿತಿ ಮತ್ತು ಗ್ರಾಮ ಪಂಚಾಯತಿ ಸಹಯೋಗದೊಂದಿಗೆ ಆಯೋಜಿಸಿದ್ದ ರಾಷ್ಟ್ರೀಯ ಗ್ರಾಹಕರ ಸಂರಕ್ಷಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರೂ ಸಹ ಕಾನೂನಿನ ಜ್ಞಾನ ಪಡೆಯಬೇಕು ಅಪರಾಧ, ಸಿವಿಲ್ ಕಾನೂನಿನ ಬಗ್ಗೆ ತಿಳಿದುಕೊಂಡಾಗ ಮಾತ್ರ ಅಪರಾಧಗಳು ಕಡಿಮೆಯಾಗುತ್ತವೆ. ಕಾನೂನು ನಿರಂತರವಾಗಿ ಅಭ್ಯಾಸ ಮಾಡಬೇಕು. ಅದರಲ್ಲಿ ದೈನಂದಿನ ಚಟುವಟಿಕೆ ಬಗ್ಗೆ ಕಾನೂನು ಜ್ಞಾನ ಹೊಂದಬೇಕು, ಜಾಗೃತರಾಗಬೇಕು ಎಂದು ಹೇಳಿದರು.

ಯಾವುದೇ ವಸ್ತು ಖರೀದಿಸುವವರು ಗ್ರಾಹಕರಾಗುತ್ತಾರೆ. ಯಾವುದೇ ಖರೀದಿಗೆ ರಸೀದಿ ಅಗತ್ಯ.ಯಾವುದೇ ತೊಂದರೆಗಳಿಂದ ಒಳಗಾದಲ್ಲಿ, ಅನ್ಯಾಯವಾಗಿದ್ದರೆ ಮಾಲೀಕರ ವಿರುದ್ದ ದೂರು ಸಲ್ಲಿಸಿ ಕಾನೂನು ಮೂಲಕ ಪರಿಹಾರ ಪಡೆಯಬಹುದಾಗಿದೆ. ಎಂದರು ಪ್ಯಾನಲ್ ವಕೀಲರಾದ ಎಂ. ಮೃತ್ಯುಂಜಯ ಮಾತನಾಡಿ, ಗ್ರಾಹಕ ಸಂರಕ್ಷಣಾ ಕಾಯ್ದೆ ಕುರಿತು ಕಾನೂನು ಅರಿವು ಉಪನ್ಯಾಸ ನೀಡಿದ ಅವರು, ವಸ್ತು ಅಥವಾ ಸೇವೆ ಪಡೆಯುವುದನ್ನೇ ಗ್ರಾಹಕರಾಗುತ್ತೇವೆ. ಅನ್ಯಾಯವಾಗಿರುವ ಗ್ರಾಹಕರು ಪರಿಹಾರ ಪಡೆಯುವುದಾಗಿದೆ. ಯಾವುದೇ ಆಸ್ಪತ್ರೆಗೆ ತೆರಳಿ ಅನಾರೋಗ್ಯ ತಪಾಸಣೆ ಮಾಡಿಸಿಕೊಂಡು ಚಿಕಿತ್ಸೆ ಪಡೆದು ಸೇವೆಯಲ್ಲಿ ವ್ಯತ್ಯಯವಾದಲ್ಲಿ ಗ್ರಾಹಕ ಸಂರಕ್ಷಣಾ ಅಧಿನಿಮಯದ ಪ್ರಕಾರ ಪರಿಹಾರ ಪಡೆಯಬಹುದಾಗಿದೆ. ಗ್ರಾಹಕರಾದವರು ಕೊಳ್ಳುವಾಗ ಎಚ್ಚರಿಕೆ ವಹಿಸುವಂತೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾ.ಪಂ. ಅಧ್ಯಕ್ಷೆ ಉಮಲಿಬಾಯಿ, ಉಪಾಧ್ಯಕ್ಷೆ ಪಕ್ಕೀರವ್ವ, ವಕೀಲರ ಸಂಘದ ಉಪಾಧ್ಯಕ್ಷ ಎಸ್. ಮಂಜುನಾಥ ಬಾಗಳಿ, ಕಾರ್ಯದರ್ಶಿ ಮಲ್ಲಪ್ಪ.ಎಂ. ಜಂಟಿ ಕಾರ್ಯದರ್ಶಿ ಸಿ. ರಾಜಪ್ಪ, ವಕೀಲ ಪ್ರಭಾಕರ್, ಕರಿಬಸಪ್ಪ, ಪಿ. ಪುರಸಭೆ ಸದಸ್ಯರಾದ ಗೊಂಗಡಿ ನಾಗರಾಜ, ಕಾರ್ಯದರ್ಶಿ ನಂದಿಶ್, ಗ್ರಾ.ಪಂ. ಮಾಜಿ. ಅಧ್ಯಕ್ಷ ಅಶೋಕ, ಸದಸ್ಯರಾದ ಕೊಂಡಿ ಪ್ರಕಾಶ್, ರಾಜಪ್ಪ, ತಾಲ್ಲೂಕು ಪ್ರಾಧಿಕಾರದ ಸಿಬ್ಬಂದಿಗಳಾದ ಕೊಟ್ರೇಶ್, ಬಸವರಾಜ್, ಸಿಬ್ಬಂದಿಗಳಾದ ಟಿ.ವೆಂಕಟೇಶ್, ಶೇಖರ್ ನಾಯ್ಕ, ಜಗದೀಶ್, ರಾಜಪ್ಪ, ಸೇರಿದಂತೆ ಇತರರು ಇದ್ದರು.

# ಅಕ್ರಮ ಮರಳು ಗಣಿಗಾರಿಕೆ ; ಕ್ರಮಕ್ಕೆ ಲಿಖಿತ ಸೂಚನೆ: ಡಿಸಿ

ದಾವಣಗೆರೆ, ಡಿ. 30- ಜಿಲ್ಲೆಯಲ್ಲಿ ಅಕ್ರಮ ಮರಳು ಹಾಗೂ ಮಣ್ಣು ಗಣಿಗಾರಿಕೆ ತಡೆಯಲು ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳಿಗೆ ಲಿಖಿತವಾಗಿಯೇ ಸೂಚನೆ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಹೇಳಿದರು.

ಸೋಮವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಭಿವೃದ್ಧಿ ಕಾರ್ಯಗಳಿಗೆ ಮರಳು, ಮಣ್ಣು ಅಗತ್ಯವಾಗಿದೆ. ಯಾರು ಕಾನೂನು ಬದ್ಧವಾಗಿ ಗಣಿಗಾರಿಕೆ ಮಾಡುತ್ತಿದ್ದಾರೋ ಅವರಿಗೆ ಯಾವುದೇ ತೊಂದರೆ ಇಲ್ಲ. ಆದರೆ, ಕಾನೂನುಬಾಹಿರ ಗಣಿಗಾರಿಕೆ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ನಿರ್ದೇಶನ ನೀಡಲಾಗಿದೆ ಎಂದು ಹೇಳಿದರು. ಚಿಗಟೇರಿ ಜಿಲ್ಲಾಸ್ಪತ್ರೆಯ ಪ್ರಧಾನ ಕಟ್ಟಡ ಶಿಥಿಲಗೊಂಡಿರುವುದರಿಂದ ಅದನ್ನು ಪಕ್ಕದ ಹಳೆ ಹೆರಿಗೆ ಆಸ್ಪತ್ರೆ ಕಟ್ಟಡಕ್ಕೆ ಸ್ಥಳಾಂತರಿಸಲು ಕ್ರಮ ವಹಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ಹೇಳಿದರು.


# ಅದಾನಿ ವಿಲ್ಮರ್ ಪಾಲು ಮಾರಿ 2 ಶತಕೋಟಿ ಡಾಲರ್ ಪಡೆಯಲು ನಿರ್ಧಾರ

ನವದೆಹಲಿ, ಡಿ. 30- ಆಹಾರ ಸಂಬಂಧಿತ ಅದಾನಿ ವಿಲ್ಮರ್ ಜಂಟಿ ಉದ್ಯಮದಿಂದ ನಿರ್ಗಮಿಸುವುದಾಗಿ ಅದಾನಿ ಸಮೂಹ ತಿಳಿಸಿದೆ. ಮುಕ್ತ ಮಾರುಕಟ್ಟೆಯಲ್ಲಿ ಪಾಲು ಮಾರುವ ಮೂಲಕ ಎರಡು ಶತಕೋಟಿ ಡಾಲರ್ ಪಡೆಯಲು ನಿರ್ಧರಿಸಲಾಗಿದೆ.

ಅಮೆರಿಕದಲ್ಲಿ ಉದ್ಯಮಿ ಗೌತಮಿ ದಾನಿ ಅವರ ವಿರುದ್ಧ ದೋಷಾರೋಪ ಮಾಡಿದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ. ಅದಾನಿ ವಿಲ್ಮರ್ ಸಮೂಹದಲ್ಲಿ ಅದಾನಿ ಎಂಟರ್‌ಪ್ರೈಸಸ್ ಶೇ. 43.94 ರಷ್ಟು ಪಾಲುಗಾರಿಕೆ ಹೊಂದಿದೆ. ಇದರಲ್ಲಿನ ಶೇ. 31.06 ಪಾಲುಗಾರಿಕೆಯನ್ನು ವಿಲ್ಮರ್ ಇಂಟರ್ನ್ಯಾಷನಲ್ ಪಡೆಯಲಿದೆ. ಶೇ.13ರ ಪಾಲುಗಾರಿಕೆಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಲಾಗುವುದು. ಮುಂದಿನ ವರ್ಷ ಮಾರ್ಚ್ 31ರ ಒಳಗೆ ಈ ಪ್ರಕ್ರಿಯೆ ಪೂರ್ಣಗೊಳ್ಳುವ ಸಾಧ್ಯತೆ ಇದೆ.

# ಡೆಂಟಲ್ ಅಸೋಸಿಯೇಷನ್ ಅಧ್ಯಕ್ಷರಾಗಿ ಡಾ.ಎಲ್.ಅಶೋಕ್

## ಡಾ.ವಿಕ್ರಮ್ ಕಾರ್ಯದರ್ಶಿ- ಡಾ.ಶ್ರುತಿ ಖಜಾಂಚಿ


ದಾವಣಗೆರೆ, ಡಿ.30- ಇಂಡಿಯನ್ ಡೆಂಟಲ್ ಅಸೋಸಿಯೇಷನ್ ನಗರ ಘಟಕದ ಅಧ್ಯಕ್ಷರಾಗಿ ಡಾ.ಎಲ್.ಅಶೋಕ್, ಗೌರವ ಕಾರ್ಯದರ್ಶಿಯಾಗಿ ಡಾ.ವಿಕ್ರಮ್ ಎಸ್. ಅಂಬರ್‌ಕರ್, ಗೌರವ ಖಜಾಂಚಿಯಾಗಿ ಡಾ.ಎಂ.ಎಸ್.ಶೃತಿ ಆಯ್ಕೆಯಾಗಿದ್ದಾರೆ.

ಈಚೆಗೆ ಜರುಗಿದ ಸಂಘದ ವಾರ್ಷಿಕ ಮಹಾಸಭೆಯ ಸಂದರ್ಭದಲ್ಲಿ ಈ ನೂತನ ಆಯ್ಕೆ ನಡೆಯಿತು. ಅಲ್ಲದೇ ಸಂಘದ ಸಲಹಾ ಸಮಿತಿ ಸದಸ್ಯರಾಗಿ ಡಾ.ವಸುಂದರ ಶಿವಣ್ಣ, ಡಾ.ಐ.ಎಂ ಅಲಿ, ಡಾ.ಡಿ.ಬಿ. ನಂದೀಶ್ವರ್ ಮತ್ತು ಡಾ.ಶೋಭಾ ಪ್ರಕಾಶ್ ಆಯ್ಕೆಯಾಗಿದ್ದಾರೆ.

॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥

## ಪುಣ್ಯಸ್ಮರಣೆ



**ಶ್ರೀಮತಿ ಮುದೇಗೌಡ್ರು ರತ್ನಮ್ಮನವರು**

ಲಿಂಗೈಕ್ಯ 31.12.2010

ನೀವು ನಮ್ಮನ್ನಗಲಿ ಇಂದಿಗೆ ಹದಿನಾಲ್ಕು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ ಪ್ರತಿ ದಿನ, ಪ್ರತಿಕ್ಷಣ ನಿಮ್ಮನ್ನು ನೆನೆಯುತ್ತಾ,
ನೀವು ತೋರಿದ ಅದಮ್ಯ ಪ್ರೀತಿಯನ್ನು ಸ್ಮರಿಸುತ್ತಾ,
ನೀವು ಜೀವನದಲ್ಲಿ ಬದುಕಿದ ರೀತಿಯೇ ನಮಗೆ ಮಾರ್ಗದರ್ಶನ.

**ಇಂತಿ ಕುಟುಂಬ ವರ್ಗ : ಶ್ರೀ ಮುದೇಗೌಡ್ರು ನಾಗರಾಜಪ್ಪ ಮತ್ತು ಮಕ್ಕಳು**
**ಶ್ರೀಮತಿ ಪ್ರೀತ ಮತ್ತು ಶ್ರೀ ರಂಜನ್ ಕೆ.ಎಂ.**
**ಪುಟಾಣಿ : ಗೌರಿ, ದಿಯಾ, ಆದ್ಯ**
**ಶ್ರೀ ಮುದೇಗೌಡ್ರು ಸಿದ್ದಲಿಂಗಪ್ಪ ಹಾಗೂ ಮಕ್ಕಳು**
**ಶ್ರೀಮತಿ ಅನ್ನಪೂರ್ಣಮ್ಮ ಹಾಲಪ್ಪ ಮತ್ತು ಮಕ್ಕಳು,** ನ್ಯಾಮತಿ.
**ಮುದೇಗೌಡ್ರು ವಂಶಸ್ಥರು, ವಡ್ಡಿನಕಟ್ಟಿ ಗೌಡ್ರ ವಂಶಸ್ಥರು, ಹಿರೇಕೆರೂರು.**

## ಶ್ರೀ ಆರುಂಡಿ ನಿಂಗಪ್ಪ ನಿಧನ



ಹರಪನಹಳ್ಳಿ ತಾಲ್ಲೂಕು ಹಳೇ ಬಸ್ ನಿಲ್ದಾಣದ ಹತ್ತಿರದ ವಾಸಿ ಹಿರಿಯ ವಕೀಲರು **ಶ್ರೀ ಆರುಂಡಿ ನಿಂಗಪ್ಪ** ಅವರು ದಿನಾಂಕ : 30.12.2024ರ ಸೋಮವಾರ ಬೆಳಿಗ್ಗೆ 11.45ಕ್ಕೆ ನಿಧನರಾದರು. ಮೃತರಿಗೆ 92 ವರ್ಷ ವಯಸ್ಸಾಗಿದೆ.

ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ಅಪಾರ ಬಂಧು-ಬಳಗ ಹಾಗೂ ವಕೀಲರ ವರ್ಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 31.12.2024ರ ಮಂಗಳವಾರ ಬೆಳಿಗ್ಗೆ 10.30ಕ್ಕೆ ಹರಪನಹಳ್ಳಿ ಪಟ್ಟಣದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ : **99015 17600, 82771 50503**

## ಶಾಮನೂರು ಬಿಂದಪ್ಪ ಪಾರ್ವತಮ್ಮ ನಿಧನ



ದಾವಣಗೆರೆ ಸಿಟಿ ಶಾಮನೂರು ವಾಸಿ ಲಿಂ. ಬಿಂದಪ್ಪ ಕೊಟ್ರಪ್ಪನವರ ಧರ್ಮಪತ್ನಿ

**ಶ್ರೀಮತಿ ಪಾರ್ವತಮ್ಮ** (90 ವರ್ಷ)

ಅವರು ದಿನಾಂಕ 30.12.2024ರ ಸೋಮವಾರ ರಾತ್ರಿ 9.50ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೂವರು ಪುತ್ರರು, ಏಳು ಜನ ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 31.12.2024ರ ಮಂಗಳವಾರ ಮಧ್ಯಾಹ್ನ 1.30ಕ್ಕೆ ಗ್ಲಾಸ್ ಹೌಸ್ ಪಕ್ಕದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಬಿಂದಪ್ಪ ವಂಶಸ್ಥರು**
**ಮೊ. 91643 32566, 87222 22443, 96200 20743**

# ರಾಣೇಬೆನ್ನೂರಿನಲ್ಲಿ ನ್ಯಾಷನಲ್ ಪಬ್ಲಿಕ್ ಶಾಲೆಯ 22ನೇ ವರ್ಷದ ವಾರ್ಷಿಕೋತ್ಸವ

ರಾಣೇಬೆನ್ನೂರು, ಡಿ. 30- ನಗರದ ಹುಣಸಿಕಟ್ಟೆ ರಸ್ತೆಯಲ್ಲಿರುವ ನ್ಯಾಷನಲ್ ಪಬ್ಲಿಕ್ ಶಾಲೆಯಲ್ಲಿ 22ನೇ ವರ್ಷದ ಶಾಲಾ ವಾರ್ಷಿಕೋತ್ಸವವು ಜನವರಿ 2 ರಂದು ಶಾಲಾ ಆವರಣದಲ್ಲಿ ಜರುಗಲಿದೆ.

ಶಾಲೆಯ ಅಧ್ಯಕ್ಷರಾದ ಶ್ರೀಮತಿ ವಜ್ರೇಶ್ವರಿ ವಿ. ಲದ್ವಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ. ಮುಖ್ಯ ಅತಿಥಿಗಳಾಗಿ ನಿವೃತ್ತ ಉಪನ್ಯಾಸಕರು ಹಾಗೂ ಸಂಪಾದಕರಾದ ರವೀಂದ್ರ ರೇಷ್ಮೆ, ರಾಣೇಬೆನ್ನೂರಿನ ಕ್ಷೇತ್ರ ಶಿಕ್ಷಣಾಧಿಕಾರಿ ಶ್ಯಾಮಸುಂದರ ಅಡಿಗ ರವರು, ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ತುಳಜಪ್ಪ ಲದ್ವಾ ಇತರರು ಉಪಸ್ಥಿತರಿರುವರು.

ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕ ವೃಂದದವರು, ಮುದ್ದು ಮಕ್ಕಳು, ಪಾಲಕರು, ಪೋಷಕ ಬಂಧುಗಳು ಹಾಜರಿರುವರು. ಅಂದು ಮಕ್ಕಳಿಂದ ವಿವಿಧ ಬಗೆಯ ಸಾಂಸ್ಕೃತಿಕ ಹಾಗೂ ಮನರಂಜನಾ ಕಾರ್ಯಕ್ರಮಗಳು ಜರುಗುವವು ಎಂದು ಶಾಲೆಯ ಪ್ರಾಂಶುಪಾಲ ಶೈನ್ ಜೋಶ್ ತಿಳಿಸಿದ್ದಾರೆ.

## ಹಳ್ಳಳ್ಳಿ ವಿಶ್ವನಾಥಪ್ಪ ನಿಧನ



ದಾವಣಗೆರೆ ಸಿಟಿ, ಎಸ್.ಎಸ್. ಲೇಔಟ್ 'ಎ' ಬ್ಲಾಕ್, 7ನೇ ಮೇನ್, # 5090/28ರ ವಾಸಿ ಹಳ್ಳಳ್ಳಿ ವಿಶ್ವನಾಥಪ್ಪ (90) (ಪ್ರೊ. ಮಲ್ಲಿಕಾರ್ಜುನ ಸ್ಟೋರ್ಸ್, ದಾವಣಗೆರೆ) ಅವರು ದಿನಾಂಕ 30.12.2024 ರ ಮಧ್ಯಾಹ್ನ 2 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 31.12.2024ರ ಮಂಗಳವಾರ ಮಧ್ಯಾಹ್ನ 3 ಗಂಟೆಗೆ ಗ್ಲಾಸ್‌ಹೌಸ್ ಹತ್ತಿರದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

# ಹೊನ್ನಾಳಿ : ರಸ್ತೆ ಅಪಘಾತದಲ್ಲಿ ಸಾವು

ಹೊನ್ನಾಳಿ, ಡಿ.30- ತಾಲ್ಲೂಕಿನ ಬಿದರಗಡ್ಡೆ (33) ಮಂಜುನಾಥ್ ಪಾಟೀಲ್ ಬಿನ್ ಕರಿಬಸಪ್ಪ ಹೊನ್ನಾಳಿಯಿಂದ ಬಿದಿರುಗಡ್ಡೆ ಸ್ವಗ್ರಾಮಕ್ಕೆ ಭಾನುವಾರ ರಾತ್ರಿ 10 ಗಂಟೆಗೆ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಕೆಳಗೆ ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಹಿಂಬದಿ ಕೂತಿದ್ದ ಶಶಿಗೆ ಪೆಟ್ಟಾಗಿದ್ದು, ಶಿವಮೊಗ್ಗದಲ್ಲಿ ಚಿಕಿತ್ಸೆ ಪಡೆಯುತ್ತಿರುವುದಾಗಿ ಪೊಲೀಸ್ ಇನ್‌ಸ್ಪೆಕ್ಟರ್ ಸುನಿಲ್ ಕುಮಾರ್ ತಿಳಿಸಿದ್ದಾರೆ.

# ಅಮೆರಿಕಾದ 39ನೇ ಅಧ್ಯಕ್ಷ ಜಿಮ್ಮಿ ಕಾರ್ಟರ್ ನಿಧನ



ಅಟ್ಲಾಂಟಾ, ಡಿ. 30 - ಅಮೆರಿಕಾದ 39ನೇ ಅಧ್ಯಕ್ಷ ಜಿಮ್ಮಿ ಕಾರ್ಟರ್ ಅವರು 100ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ. ಕೃಷಿಕ ಹಿನ್ನೆಲೆಯ ಕಾರ್ಟರ್ ಅವರು ಅಧಿಕಾರದಲ್ಲಿದ್ದಾಗ ವಿಶ್ವದಾದ್ಯಂತ ಮಾನವೀಯ ನೆರವಿಗೆ ಕ್ರಮ ತೆಗೆದುಕೊಂಡು ಹೆಸರು ಮಾಡಿದ್ದರು.

ವಾಷಿಂಗ್ಟನ್‌ನಲ್ಲಿ ಸರ್ಕಾರಿ ಗೌರವಗಳೊಂದಿಗೆ ಅವರ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಅಮೆರಿಕ ಅಧ್ಯಕ್ಷ ಜೋ ಬಿಡೆನ್ ತಿಳಿಸಿದ್ದಾರೆ.

ಅಮೆರಿಕಾವು ವಾಟರ್‌ಗೇಟ್ ಹಗರಣ ಹಾಗೂ ವಿಯೆಟ್ನಾಂ ಸಮರದ ಬಿಕ್ಕಟ್ಟಿನಲ್ಲಿ ಸಿಲುಕಿದ ಸಂದರ್ಭದಲ್ಲಿ ಕಾರ್ಟರ್ ಅಧಿಕಾರಕ್ಕೆ ಬಂದಿದ್ದರು. ಕಾರ್ಟರ್ ಅವರು ಅಧ್ಯಕ್ಷರಾಗುವ ಮುಂಚೆ ಉದ್ಯಮಿಯಾಗಿ ಹಾಗೂ ನೌಕಾದಳದ ಅಧಿಕಾರಿಯಾಗಿಯೂ ಕಾರ್ಯ ನಿರ್ವಹಿಸಿದ್ದರು. 80ರ ವಯಸ್ಸಿನಲ್ಲಿ ಅವರು ಪ್ರಮುಖ ರಾಯಭಾರಿ ಯೋಜನೆಗಳನ್ನು ಜಾರಿಗೆ ತಂದಿದ್ದರು.

# ಹೊನ್ನಾಳಿಯಲ್ಲಿ ಮನೆಗಳ್ಳತನ

ಹೊನ್ನಾಳಿ, ಡಿ.30- ದುರ್ಗಿಗುಡಿ ಉತ್ತರ ಭಾಗದ ಮಾರಿಕೊಪ್ಪ ರಸ್ತೆ ಬಳಿಯ ದೀಪಾ ನಾಗರಾಜ್ ಅವರ ಮನೆಯಲ್ಲಿ ಸುಮಾರು 3,15,000 ಮೌಲ್ಯದ ಬಂಗಾರ, ನಗದು ಹಣ ಕಳ್ಳತನವಾಗಿರುವ ಘಟನೆ ನಡೆದಿದೆ.

ಬೀಗ ಒಡೆದು ಮನೆಯ ಕಳುವು ಮಾಡಿದ್ದು, 45 ಗ್ರಾಂ ಬಂಗಾರದ ಒಡವೆ, 80 ಗ್ರಾಂ ಹ್ಯಾಂಗಿಂಗ್ಸ್, 6 ಗ್ರಾಂನ ಮೂರು ಉಂಗುರ, ಐವತ್ತು ಸಾವಿರ ನಗದು ಸೇರಿದಂತೆ 2,65,000 ಮೌಲ್ಯದ ಒಡವೆ ಬಂಗಾರ ಕಳ್ಳತನವಾಗಿದ್ದು, ಪಿಎಸ್‌ಐ ನಿರ್ಮಲ ರವರು ದೂರು ದಾಖಲಿಸಿಕೊಂಡು ತನಿಖೆ ಮುಂದುವರಿಸಿರುವರು.

# ಜಗಳೂರು : ಕಟ್ಟಡ ಕಾರ್ಮಿಕ ಸಂಘದ ಭವನ ನಿರ್ಮಾಣಕ್ಕೆ ಶಾಸಕರಿಗೆ ಮನವಿ



ಜಗಳೂರು, ಡಿ. 30- ಕಟ್ಟಡ ಕಾರ್ಮಿಕರ ಸಂಘಕ್ಕೆ ನಿವೇಶನ ಹಾಗು ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ಕಲ್ಪಿಸಬೇಕೆಂದು ಶಾಸಕ ಬಿ.ದೇವೇಂದ್ರಪ್ಪ ಅವರಿಗೆ ಕಾರ್ಮಿಕರು ಮನವಿ ಸಲ್ಲಿಸಿದರು.

ಜಗಳೂರು ತಾಲ್ಲೂಕು ಕಟ್ಟಡ ಕಾರ್ಮಿಕರ ಸಂಘದ ವತಿಯಿಂದ ಮನವಿ ಸಲ್ಲಿಸಿ ಸಂಘದ ಗೌರವಾಧ್ಯಕ್ಷ ಪಿ.ಆರ್.ತಿಪ್ಪೇಸ್ವಾಮಿ ಮಾತನಾಡಿ, ಅಸಂಘಟಿತ ವಲಯದಲ್ಲಿ ಶ್ರಮಿಕ ವರ್ಗವಾಗಿ ದುಡಿಯುತ್ತಿದ್ದೇವೆ. ನಾವು ಸಂಘಟಿತರಾಗಿ ಕಟ್ಟಡ ಕಾರ್ಮಿಕ ಸಂಘಟನೆ ಪ್ರಾರಂಭಿಸಿ ತಾಲ್ಲೂಕಿನ ಕಟ್ಟಡ ಕಾರ್ಮಿಕರ ಮೂಲ ಸೌಕರ್ಯ ಮತ್ತು ಮಕ್ಕಳ ವಿದ್ಯಾಭ್ಯಾಸ ಹಾಗು ಆಕಸ್ಮಿಕ ಘಟನಾವಳಿಗಳು ಹೀಗೆ ಅನೇಕ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಹೆಜ್ಜೆ ಹಾಕುತ್ತಿದ್ದೇವೆ.

ಕಟ್ಟಡ ಕಾರ್ಮಿಕರ ಸಭೆ ನಡೆಸಲು ಮತ್ತು ಸಮಸ್ಯೆಗಳನ್ನು ಆಲಿಸಲು ಸೂಕ್ತ ಕಟ್ಟಡ ಇಲ್ಲದೆ ಬಾಡಿಗೆ ಕೊಠಡಿಗಳಲ್ಲಿ ನಡೆಸುತ್ತಿದ್ದೇವೆ. ಆದ್ದರಿಂದ ಶಾಸಕರು ನಮ್ಮ ಸಮಸ್ಯೆಗೆ ಸ್ಪಂದಿಸಿ ಅಗತ್ಯ ನಿವೇಶನ ನೀಡಬೇಕು ಎಂದು ಮನವಿ ಮಾಡಿದರು.

ಸಂಘದ ಅಧ್ಯಕ್ಷ ಕೆ.ಎ.ಸಿರಾಜ್ ಖಾನ್ ಮಾತನಾಡಿ, ಸಂಘದ ಚಟುವಟಿಕೆಗಳನ್ನು ನಡೆಸಲು ನಮ್ಮ ಸಂಘಕ್ಕೆ ಅಗತ್ಯವಾಗಿ ನಿವೇಶನ ಮತ್ತು ಸಮುದಾಯ ಭವನ ಅವಶ್ಯಕವಾಗಿದೆ. ಪಟ್ಟಣದ ಖಾಸಗಿ ಬಡಾವಣೆಯಲ್ಲಿ ಸಾರ್ವಜನಿಕರ ಉಪಯೋಗಕ್ಕೆ ಮೀಸಲಿರುವ ಸ್ಥಳಗಳಲ್ಲಿ ನಮಗೆ ನಿವೇಶನ ಗುರುತಿಸಿ ಸುಸಜ್ಜಿತ ಸಮುದಾಯ ಭವನ ನಿರ್ಮಾಣಕ್ಕೆ ಅಗತ್ಯ ಅನುದಾನ ನೀಡಲು ಮನವಿ ಮಾಡಿದರು.

ಮನವಿಗೆ ಸ್ಪಂದಿಸಿದ ಶಾಸಕರು, ಶೀಘ್ರವೇ ಪಟ್ಟಣ ಪಂಚಾಯತಿ ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಹಾಗು ಅಧಿಕಾರಿಗಳೊಂದಿಗೆ ಮಾಹಿತಿ ಪಡೆದು, ನಿಮ್ಮ ಸಮುದಾಯ ಭವನ ಹಾಗೂ ಮೂಲ ಸೌಲಭ್ಯ ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಅಜೇಯ್, ಪ್ರಧಾನ ಕಾರ್ಯದರ್ಶಿ ಮುಜೀದ್, ಕಾರ್ಯದರ್ಶಿ ಆರಿಫ್ ಉಲ್ಲಾ, ಸಂಘಟನಾ ಕಾರ್ಯದರ್ಶಿ ಮಹಮದ್ ರಫೀಕ್, ಖಜಾಂಚಿ ಮಹಮದ್ ಮಷೀರ್, ಸಂಚಾಲಕ ನೂರ್ ಅಹಮದ್, ಸದಸ್ಯರಾದ ಹನುಮಂತಪ್ಪ, ಮಂಜಪ್ಪ, ಜಾವಿದ್, ಇಸ್ಮಾಯಿಲ್, ಓಬಳೇಶ್ ಇದ್ದರು.

# ಸರ್ಕಾರಕ್ಕೆ ಮುಜುಗರ ಆದರೆ ರಾಜೀನಾಮೆ

## ಸಚಿನ್ ಪಾಂಚಾಳ್ ಆತ್ಮಹತ್ಯೆಗೂ ನನಗೂ ಸಂಬಂಧವಿಲ್ಲ: ಪ್ರಿಯಾಂಕ್ ಖರ್ಗೆ

ಬೆಂಗಳೂರು, ಡಿ. 30- ಗುತ್ತಿಗೆದಾರ ಸಚಿನ್ ಪಾಂಚಾಳ್ ಆತ್ಮಹತ್ಯೆಗೂ ನನಗೂ ಸಂಬಂಧವಿಲ್ಲ, ಪ್ರಕರಣದಲ್ಲಿ ಸರ್ಕಾರಕ್ಕೆ ಮುಜುಗರ ಆಗುವುದಾದರೆ ತಾವು ಸಚಿವ ಸ್ಥಾನ ತೊರೆಯುವುದಾಗಿ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸ್ಪಷ್ಟಪಡಿಸಿದ್ದಾರೆ.

ಆತ್ಮಹತ್ಯೆ ಪ್ರಕರಣ ದಿನದಿಂದ ದಿನಕ್ಕೆ ಹೊಸ ತಿರುವು ಪಡೆದುಕೊಳ್ಳುತ್ತಿರುವ ಬೆನ್ನಲ್ಲೇ ಮುಖ್ಯಮಂತ್ರಿಗಳ ಕಾವೇರಿ ನಿವಾಸದಲ್ಲಿ ಭೇಟಿ ಮಾಡಿ, ಘಟನೆಗೆ ಸಂಬಂಧಿಸಿದಂತೆ ಸಿಐಡಿ ಇಲ್ಲವೇ ಎಸ್ಐಟಿಯಿಂದ ತನಿಖೆ ನಡೆಸಿ ಎಂದು ಕೋರಿದ್ದಾರೆ.

ಪ್ರಿಯಾಂಕ್ ಅವರ ಮನವಿ ಮೇರೆಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಜೊತೆ ಸಮಾಲೋಚನೆ ನಡೆಸಿದ ಮುಖ್ಯಮಂತ್ರಿ ಅವರು, ಪ್ರಕರಣವನ್ನು ಸಿಐಡಿಗೆ ವಹಿಸುವಂತೆ ಸ್ಥಳದಲ್ಲೇ ಆದೇಶಿಸಿದರು.

ತನಿಖೆ ವರದಿ ಬರುವವರೆಗೂ ನಾನು ಸರ್ಕಾರದಿಂದ ಹೊರಗಿರುತ್ತೇನೆ, ಈ ಬಗ್ಗೆ ನೀವೇ ನಿರ್ಧಾರ ಕೈಗೊಳ್ಳಿ ಎಂದಿದ್ದಾರೆ.

ಗುತ್ತಿಗೆದಾರ ಯಾವ ಕಾರಣಕ್ಕೆ ಆತ್ನಹತ್ಯೆಗೆ ಶರಣಾಗಿದ್ದಾರೋ ನನಗೆ ತಿಳಿಯದು, ಆದರೆ, ಅವರ ಡೆತ್‌ನೋಟ್ ಬಗ್ಗೆ ನನಗೆ ಸಂಶಯ ಇದ್ದು, ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿ ತನಿಖೆ ಮಾಡಿಸಿ ಎಂದು ಮನವಿ ಮಾಡಿದ್ದಾರೆ.

ಕಲಬುರಗಿ ಮಹಾನಗರ ಪಾಲಿಕೆ ಮಾಜಿ ಸದಸ್ಯ ಹಾಗೂ ಕಾಂಗ್ರೆಸ್‌ನ ಸ್ಥಳೀಯ ಮುಖಂಡ ರಾಜು ಕಪನೂರ್ ಅವರ ಮೇಲೆ ಆತ್ಮಹತ್ಯೆಗೂ ಮುನ್ನ ಗುತ್ತಿಗೆದಾರರು ಆರೋಪ ಮಾಡಿದ್ದಾರೆ.

ಪಕ್ಷದ ಕಾರ್ಯಕರ್ತರ ಜೊತೆ ನಮ್ಮ ಕುಟುಂಬ ಉತ್ತಮ ಬಾಂಧವ್ಯ ಹೊಂದಿದೆ, ಎಲ್ಲರನ್ನೂ ನಾವು ಗೌರವದಿಂದ ನೋಡುತ್ತೇವೆ.

ಸಭೆ, ಸಮಾರಂಭಗಳಲ್ಲಿ, ಪಕ್ಷದ ಕಾರ್ಯಕ್ರಮಗಳಲ್ಲಿ ನಾನು ಮುಖಂಡರ ಜೊತೆ ಭಾಗಿಯಾಗುತ್ತೇನೆ, ಕಪನೂರ್ ಜೊತೆ ಇರುವ ಕೆಲವು ಭಾವಚಿತ್ರಗಳನ್ನು ಬಿಜೆಪಿ ಮುಂದಿಟ್ಟುಕೊಂಡು ರಾಜಕೀಯ ಮಾಡುತ್ತಿದೆ. ಬಿಜೆಪಿ ನಡವಳಿಕೆ ಬಗ್ಗೆ ನಾವು ಹಿಂದಿನಿಂದಲೂ ವಿರೋಧಿಸುತ್ತಿರುವುದಕ್ಕೂ, ಈ ಆತ್ಮಹತ್ಯೆ ಪ್ರಕರಣಕ್ಕೂ ನನಗೂ ಸಂಬಂಧ ಕಲ್ಪಿಸುವ ಪಿತೂರಿ ಪ್ರತಿಪಕ್ಷದಿಂದ ನಡೆದಿದೆ.

ಸಚಿವನಾಗಿ ಇಲಾಖೆ ಮತ್ತು ಕ್ಷೇತ್ರದಲ್ಲಿ ಭ್ರಷ್ಟಾಚಾರಕ್ಕೆ ಅವಕಾಶ ನೀಡದಿರುವುದು ಕೆಲವರಿಗೆ ಮೂಗು ಮುರಿಯುವಂತೆ ಮಾಡಿದೆ.

ಪ್ರಕರಣದಲ್ಲಿ ನನ್ನದಾಗಲೀ, ನನ್ನ ಕುಟುಂಬದ್ದಾಗಲೀ ಯಾವುದೇ ಪಾತ್ರವಿಲ್ಲ, ಈ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳಲು ನಿಮಗೆ ಮುಕ್ತ ಅವಕಾಶವಿದೆ ಎಂದು ತಿಳಿಸಿದ್ದಾರೆ.

ಪೂರ್ಣ ಮಾಹಿತಿ ಪಡೆದ ಮುಖ್ಯಮಂತ್ರಿ ಅವರು, ಯಾರೇ ಆತ್ಮಹತ್ಯೆ ಮಾಡಿಕೊಂಡರೂ, ಆಸ್ಪತ್ರೆಗಳಲ್ಲಿ ಸತ್ತರೂ ಸರ್ಕಾರವೇ ಹೊಣೆ ಎಂದು ಬಿಜೆಪಿ ಆರ್ಭಟಿಸುತ್ತದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಗೃಹ ಸಚಿವರ ಜೊತೆ ಸಮಾಲೋಚಿಸಿ ತನಿಖೆಗೆ ಆದೇಶ ಮಾಡುತ್ತೇನೆ, ಸದಸ್ಯತ್ವಕ್ಕೆ ನೀವು ರಾಜೀನಾಮೆ ನೀಡುವ ಅಗತ್ಯವಿಲ್ಲ ಎಂದಿದ್ದಾರೆ.

## ಪ್ರಿಯಾಂಕ್ ಖರ್ಗೆ ಮೇಲಿನ ಆರೋಪ ಪ್ರಕರಣದ ತನಿಖೆ ಸಿಐಡಿಗೆ



ಬೆಂಗಳೂರು, ಡಿ. 30- ಸಚಿವ ಪ್ರಿಯಾಂಕ್ ಖರ್ಗೆ ಮೇಲೆ ಬಿಜೆಪಿ ಮಾಡಿರುವ ಆರೋಪ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವರ ಮೇಲೆ ಅನಾವಶ್ಯಕ ಆಪಾದನೆ ಮಾಡುವುದು ಯಾವುದೇ ಸರ್ಕಾರಕ್ಕೆ ಸರಿ ಕಾಣುವುದಿಲ್ಲ, ಡೆತ್‌ನೋಟ್‌ನಲ್ಲಿ ಸಚಿವರ ಹೆಸರು ಸಹ ಇಲ್ಲ ಎಂಬುದಾಗಿ ಇಲಾಖಾ ಅಧಿಕಾರಿಗಳು ಹೇಳಿದ್ದಾರೆ, ಸಚಿವರ ಹೆಸರನ್ನು ಎಳೆದು ತಂದು, ಸರ್ಕಾರಕ್ಕೆ ಮಸಿ ಬಳಿಯುವ ಕೆಲಸ ಮಾಡುತ್ತಿದ್ದಾರೆ, ಸತ್ಯಾಸತ್ಯತೆ ಹೊರಬರಲಿ ಎಂಬ ದೃಷ್ಟಿಯಿಂದ ಮುಖ್ಯಮಂತ್ರಿ ಜೊತೆ ಚರ್ಚಿಸಿ ಸಿಐಡಿಗೆ ವಹಿಸಲಾಗಿದೆ ಎಂದರು.

ತನಿಖಾ ವರದಿ ಬಂದ ನಂತರ ಸತ್ಯ ಏನೆಂಬುದು ತಿಳಿಯುತ್ತದೆ, ಸಚಿವ ಸ್ಥಾನಕ್ಕೆ ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡುವ ಅಗತ್ಯ ಇಲ್ಲ, ಅನಾವಶ್ಯಕವಾಗಿ ರಾಜೀನಾಮೆಗೆ ಒತ್ತಾಯಿಸುತ್ತಿದ್ದಾರೆ.

ಬಿಜೆಪಿ ಒತ್ತಾಯಿಸಿದಂತೆ ಎಲ್ಲಾ ಪ್ರಕರಣಗಳನ್ನೂ ಸಿಬಿಐ ತನಿಖೆಗೆ ವಹಿಸಲು ಸಾಧ್ಯವಿಲ್ಲ, ಸಿಐಡಿ ಸಮರ್ಥವಾಗಿದೆ, ಅನೇಕ ಪ್ರಕರಣಗಳಲ್ಲಿ ತನಿಖಾ ವರದಿ ಬಂದಿಲ್ಲವೇ, ಬಿಜೆಪಿ ಹೇಳಿದ್ದನ್ನೆಲ್ಲಾ ಕೇಳಲು ಸಾಧ್ಯವಿಲ್ಲ, ಸಕಾರಾತ್ಮಕ ಸಲಹೆ, ಸೂಚನೆ ನೀಡಿದರೆ ಕೇಳುತ್ತೇವೆ, ಎಲ್ಲದರಲ್ಲೂ ರಾಜಕೀಯ ಮಾಡಿದರೆ ಕೇಳುವುದಿಲ್ಲ.

ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ವಿರುದ್ಧ ಶಾಸಕ ಸಿ.ಟಿ.ರವಿ ಅವಾಚ್ಯ ಪದ ಬಳಕೆ ಪ್ರಕರಣದ ಸತ್ಯಾಸತ್ಯತೆ ಹೊರಬರಬೇಕಿದೆ, ಸಿಐಡಿ ತನ್ನ ತನಿಖೆ ಪ್ರಾರಂಭಿಸಿದೆ.

ಸಾರ್ವಜನಿಕರು ಎಚ್ಚರಿಕೆಯಿಂದ ಹೊಸ ವರ್ಷಾಚರಣೆ ಮಾಡಬೇಕು, ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಹಿರಿಯ ಅಧಿಕಾರಿಗಳ ಜೊತೆ ಸಭೆ ನಡೆಸಿ, ಸೂಚಿಸಲಾಗಿದೆ, ಅಗತ್ಯ ಬಂದೋಬಸ್ತ್ ಕೈಗೊಳ್ಳಲಾಗಿದೆ, ಇತರರಿಗೆ ತೊಂದರೆಯಾಗದಂತೆ ಹೊಸ ವರ್ಷ ಆಚರಿಸಿ ಎಂದರು.

# ಕುಂಭಮೇಳದಲ್ಲಿ ಎಐ ಕ್ಯಾಮೆರಾ, ಆಪ್ ಮೂಲಕ ಯಾತ್ರಿಗಳ ಮಾಹಿತಿ

ನವದೆಹಲಿ, ಡಿ. 30- ಉತ್ತರ ಪ್ರದೇಶದ ಪ್ರಯಾಗರಾಜದಲ್ಲಿ ಮುಂದಿನ ತಿಂಗಳು ನಡೆಯಲಿರುವ ಮಹಾ ಕುಂಭಮೇಳದಲ್ಲಿ ಯಾತ್ರಿಗಳ ಲೆಕ್ಕ ಪಡೆಯಲು ಕೃತಕ ಬುದ್ಧಿವಂತಿಕೆ ಆಧರಿತ ಕ್ಯಾಮೆರಾ, ಆರ್.ಎಫ್.ಐ.ಡಿ. ಕೈಸುತ್ತು ಹಾಗೂ ಮೊಬೈಲ್ ಆಪ್ ಗಳನ್ನು ಬಳಸಲಾಗುವುದು.

ಈ ಬಗ್ಗೆ ಮಾತನಾಡಿರುವ ಉತ್ತರ ಪ್ರದೇಶದ ಸಚಿವ ಸುರೇಶ್ ಖನ್ನ, ಆಧುನಿಕ ತಂತ್ರಜ್ಞಾನ ಬಳಸಿ ದಕ್ಷ ರೀತಿಯಲ್ಲಿ ಕುಂಭಮೇಳಕ್ಕೆ ಬರುವ ಯಾತ್ರಿಗಳ ಲೆಕ್ಕ ಪಡೆಯಲಾಗುವುದು ಎಂದಿದ್ದಾರೆ.

ಮೊದಲನೆಯದಾಗಿ ಶೋಧ ಕ್ಯಾಮೆರಾಗಳನ್ನು ಬಳಸ ಲಾಗುವುದು. ಎರಡನೆಯದಾಗಿ ಆರ್‌ಎಫ್‌ಐಡಿ ಕೈ ಸುತ್ತುಗಳನ್ನು ಯಾತ್ರಿಗಳಿಗೆ ನೀಡಲಾ ಗುವುದು. ಇದರ ಮೂಲಕ ಮೇಳಕ್ಕೆ ಬರುವ ಹಾಗೂ ಹೋಗುವುದರ ಮೇಲೆ ನಿಗಾ ಇಡಲಾಗುವುದು ಎಂದವರು ತಿಳಿಸಿದ್ದಾರೆ.

ಯಾತ್ರಿಗಳು ಒಪ್ಪಿದಲ್ಲಿ ಮೊಬೈಲ್ ಆಪ್ ಒಂದನ್ನು ಬಳಸಿಕೊಳ್ಳಬಹುದು. ಇದರಲ್ಲಿನ ಜಿಪಿಎಸ್ ಬಳಸಿ ಮಾಹಿತಿ ಪಡೆಯಲಾಗುವುದು ಎಂದು ಸಚಿವರು ತಿಳಿಸಿದ್ದಾರೆ.

# ಬಸವನಕೋಟೆ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಮರಿಯಮ್ಮ ಆಯ್ಕೆ



ಜಗಳೂರು, ಡಿ.30- ತಾಲ್ಲೂಕಿನ ಬಸವನಕೋಟೆ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಮರಿಯಮ್ಮ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಇಂದು ನಡೆದ ಚುನಾವಣೆಯಲ್ಲಿ ಮರಿಯಮ್ಮ ಹಾಗೂ ರೇಖಾ ತಿಮ್ಮೇಶ್ ಅವರು ನಾಮಪತ್ರ ಸಲ್ಲಿಸಿದ್ದರು. ಇಬ್ಬರ ಉಮೇದುವಾರಿಕೆ ಊರ್ಜಿತವಾಗಿತ್ತು. ಒಟ್ಟು 14 ಜನ ಸದಸ್ಯರಿದ್ದು, ಮರಿಯಮ್ಮ ಪರ 11ಮತಗಳು, ರೇಖಾ ತಿಮ್ಮೇಶ್ ಅವರಿಗೆ 3 ಮತಗಳು ಚಲಾಯಿಸಲ್ಪಟ್ಟಿದ್ದವು.

ಅಂತಿಮವಾಗಿ 8 ಮತಗಳ ಅಂತರ ದಿಂದ ಮರಿಯಮ್ಮ ಅವರು ಆಯ್ಕೆಯಾಗಿದ್ದಾರೆ ಎಂದು ಚುನಾವಣೆ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಪ್ರಭುಶಂಕರ್ ಘೋಷಿಸಿದರು.

ಸಂದರ್ಭದಲ್ಲಿ ಗ್ರಾ.ಪಂ.ಉಪಾಧ್ಯಕ್ಷೆ ನಗೀನಬಾನು, ಸದಸ್ಯರಾದ ಜ್ಯೋತಿಲಿಂಗಪ್ಪ, ರೇಖಾ ಕೊಟ್ರೇಶ್, ಮಂಜಮ್ಮ ಭೀಮಪ್ಪ, ದೇವರಾಜ್, ಜ್ಯೋತಿಲಿಂಗಪ್ಪ, ಶರಣಪ್ಪ, ಕೊಟ್ರೇಶಪ್ಪ, ಬಿ.ಟಿ.ಬಸವರಾಜ್, ಲಲಿತಮ್ಮ ಯಲ್ಲಮ್ಮ ಮುಖಂಡರಾದ ಉದ್ದಬೋರನಹಳ್ಳಿ ಕೊಟ್ರೇಶ್, ಮಂಜುನಾಥ್, ಶಮಿವುಲ್ಲಾ, ಸುರೇಶ್, ಓಬಣ್ಣ, ಮಂಜಪ್ಪ, ಬಿ.ಟಿ.ಬಸವರಾಜ್ ಇದ್ದರು.

# ಬಿಟಿಎಸ್ ಪಾಪ್ ತಾರೆಯರನ್ನು ಭೇಟಿ ಮಾಡಲು ಮೂವರು ಬಾಲಕಿಯರಿಂದ ಅಪಹರಣ ಪ್ರಹಸನ

ಛತ್ರಪತಿ ಸಾಂಭಾಜಿ ನಗರ, ಡಿ. 30- ದಕ್ಷಿಣ ಕೊರಿಯಾದ ಜನಪ್ರಿಯ ಪಾಪ್ ಬ್ಯಾಂಡ್ ಆಗಿರುವ ಬಿಟಿಎಸ್ ಸದಸ್ಯರನ್ನು ಭೇಟಿ ಮಾಡಲು ಮಹಾರಾಷ್ಟ್ರದ ಮೂವರು ಅಪ್ರಾಪ್ತ ಬಾಲಕಿಯರು ಅಪಹರಣಗೊಂಡಿರುವ ನಾಟಕ ನಡೆಸಿದ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.


ಧರಾಶುವಾ ಜಿಲ್ಲೆಯ 11 ರಿಂದ 13 ವರ್ಷದ ಮೂವರು ಬಾಲಕಿಯರು ದಕ್ಷಿಣ ಕೊರಿಯಾಗೆ ತೆರಳಿ ಬಿಟಿಎಸ್ ತಂಡದ ಸದಸ್ಯರನ್ನು ಭೇಟಿ ಮಾಡಲು ಕನಸು ಕಂಡಿದ್ದರು.ಇದಕ್ಕಾಗಿ ಪುಣೆಗೆ ತೆರಳಿ ಹಣ ಗಳಿಸಲು ನಿರ್ಧರಿಸಿದ್ದರು ಎಂದು ಒಮರ್ಗಾ ಪೊಲೀಸ್‌ಠಾಣೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಒಮರ್ಗಾ ತಾಲ್ಲೂಕಿನ ಶಾಲಾ ವಾಹನವೊಂದರಿಂದ ಮೂವರು ಬಾಲಕಿಯರನ್ನು ಬಲವಂತವಾಗಿ ಎಳೆದೊಯ್ಯಲಾಗಿದೆ ಎಂದು ಡಿಸೆಂಬರ್ 27ರಂದು ಧರಶುವಾ ಪೊಲೀಸ್ ಸಹಾಯವಾಣಿಗೆ ಕರೆಯೊಂದು ಬಂದಿತ್ತು.

ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು ಕರೆ ಬಂದ ಸಂಖ್ಯೆಯು ಒಮರ್ಗಾದಿಂದ ಪುಣೆಗೆ ತೆರಳುವ ಸರ್ಕಾರಿ ಬಸ್‌ನಲ್ಲಿದ್ದ ಮಹಿಳೆಯೊಬ್ಬರಿಗೆ ಸೇರಿದ್ದು ಎಂದು ಪತ್ತೆ ಮಾಡಿದರು.

ಬಸ್ ಸೊಲ್ಲಾಪುರ ಜಿಲ್ಲೆಯ ಮೊಹಲ್ ಎಂಬಲ್ಲಿ ತೆರಳುತ್ತಿದ್ದಾಗ ಕರೆಯನ್ನು ಪತ್ತೆ ಮಾಡಲಾಗಿತ್ತು. ಪೊಲೀಸರು ವಿಚಾರಣೆ ನಡೆಸಿದಾಗ ಈ ಮೊಬೈಲ್ ಸಂಖ್ಯೆ ಹೊಂದಿರುವ ಮಹಿಳೆ ಮೊಹಲ್ ಬಸ್ ನಿಲ್ದಾಣದಲ್ಲಿ ಅಂಗಡಿಯೊಂದನ್ನು ನಡೆಸುತ್ತಿದ್ದಾರೆ ಎಂಬುದು ತಿಳಿದು ಬಂತು.

ನಂತರ ಆ ಮಹಿಳೆಯ ನೆರವಿನಿಂದ ಬಸ್‌ನಲ್ಲಿದ್ದ ಮೂವರು ಬಾಲಕಿಯರನ್ನು ಇಳಿಸಿ, ಸ್ಥಳೀಯ ಪೊಲೀಸ್ ಠಾಣೆಗೆ ಕರೆತರಲಾಯಿತು. ನಂತರ ಒಮರ್ಗಾ ಪೊಲೀಸ್ ತಂಡವು ಅಪ್ರಾಪ್ತರ ಪೋಷಕರ ಜೊತೆ ಸ್ಥಳಕ್ಕೆ ತಲುಪಿತು. ನಂತರ ವಿಚಾರಣೆ ನಡೆಸಿದಾಗ, ಪುಣೆಗೆ ತೆರಳುವ ಮೂಲಕ ಹಣ ಗಳಿಸಿ ಆ ಮೂಲಕ ದಕ್ಷಿಣ ಕೊರಿಯಾಗೆ ತೆರಳಲು ಬಯಸಿದ್ದಾಗಿ ಬಾಲಕಿಯರು ಹೇಳಿದ್ದಾರೆ.



**ವರದಿಗಾರರು ಬೇಕಾಗಿದ್ದಾರೆ**
ಉತ್ತಮ ಸಂಬಳವಿದೆ
ಸ್ನಾತಕೋತ್ತರ ಪತ್ರಿಕೋದ್ಯಮದ ವಿದ್ಯಾರ್ಥಿಗಳಿಗೂ ಅವಕಾಶ.
ಸಂಪರ್ಕಿಸಿ.
**86180 02539**

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ
30x40 West, 20x30 West, 20x30 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
**99166 12110**

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಶಿವ-ಪಾರ್ವತಿ ಲೇಔಟ್, ಡಾಲರ್ಸ್ ಕಾಲೋನಿ, ಎಸ್.ಎಸ್. ಲೇಔಟ್, ವಿದ್ಯಾನಗರ, ಗ್ಲಾಸ್ ಹೌಸ್ ಲೇಔಟ್ ಹಾಗೂ ಕುಂದುವಾಡ, ಯರಗುಂಟೆಯಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟುಗಳು, ಮನೆಗಳು & ಕಮರ್ಷಿಯಲ್ ಸೈಟ್ ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 30x40, 40x60, 30x50.
**97315 12365**

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ.
**90367 34919**

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
**99863 61250**
**80739 48857**

**ಬೇಕಾಗಿದ್ದಾರೆ**
ರಾಂ ಅಂಡ್ ಕೋ ಸರ್ಕಲ್ ಬಳಿಯಿರುವ ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಕಂಪ್ಯೂಟರ್ ಜ್ಞಾನವುಳ್ಳವರಿಗೆ ಆದ್ಯತೆ.
**70221 58935**

**ಬೇಕಾಗಿದ್ದಾರೆ**
ದಾವಣಗೆರೆಯಲ್ಲಿ ಕನಿಷ್ಟ ಓದಲು ಬರೆಯಲು ಬರುವಂತಹ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ.
ESI-PF ಸೌಲಭ್ಯದೊಂದಿಗೆ ವೇತನ 9000 ರಿಂದ 10,000 ಸಂಪರ್ಕಿಸಿ :
**90196 77712, 73539 50027**

**ಬೇಕಾಗಿದ್ದಾರೆ**
ದಾವಣಗೆರೆಯ ಪ್ರತಿಷ್ಠಿತ ಸಸ್ಯಹಾರಿ ಊಟದ ಹೋಟೆಲ್ ಗೆ ರೊಟ್ಟಿ ಮತ್ತು ಚಪಾತಿ ಮಾಡಲು ಮಹಿಳೆಯರು ಹಾಗೂ ಸರ್ವಿಸ್ ಗೆ ಪುರುಷ ಮತ್ತು ಮಹಿಳೆಯರು ಬೇಕಾಗಿದ್ದಾರೆ. ಉಚಿತ ಊಟ, ವಸತಿ ಸೌಲಭ್ಯವಿದೆ. ಕೂಡಲೇ ಸಂಪರ್ಕಿಸಿ :
**9448980070, 88847 04025**

**ಬೇಕಾಗಿದ್ದಾರೆ**
ಸೂಪರ್‌ವೈಸರ್ ಬೇಕಾಗಿದ್ದಾರೆ
ಹರಿಹರ.
ಆಸಕ್ತರು ಸಂಪರ್ಕಿಸಿ :
**78920 82256**

**SITE FOR SALE**
JH Patel Badavane
(E Block) 3 Main 1st Cross.
***Site Number : 723,***
***Size : 30×40*** Face: ಪೂರ್ವ
**63625 16948, 97314 54916**
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

**ರೂಂ ಬಾಡಿಗೆಗೆ ಇದೆ**
1ನೇ ಮಹಡಿ, (ಬಾತ್ ರೂಂ ಸಹಿತ) ತರಳಬಾಳು ಬಡಾವಣೆ, ಶಿವಕುಮಾರಸ್ವಾಮಿ ಮಂಟಪದ ಹತ್ತಿರ, ದಾವಣಗೆರೆ.
**9480343298, 87228 53979**

**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಡೆಲಿವರಿ ಮಾಡಲು ಟಾಟಾ ಏಸ್ ಓಡಿಸಲು ಬರುವ ಡ್ರೈವರ್‌ಗಳು ಬೇಕಾಗಿದ್ದಾರೆ.
ಕೂಡಲೇ ಸಂಪರ್ಕಿಸಿ. ವ್ಯಾಟ್ಸಪ್ ನಂ. :-
**89711 19130**
**98800 42597, 83174 04576**

**WANTED**
Labour for office & Computer work for both Men / women
**91649 23589**

**ಸಾಲಗಳಿಗಾಗಿ ಸಂಪರ್ಕಿಸಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ ಮತ್ತು ಮನೆ ಕಟ್ಟಲು ಫೈನಾನ್ಸ್ ಕಂಪನಿಯಲ್ಲಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಅತೀ ಕಡಿಮೆ ಬಡ್ಡಿದರದಲ್ಲಿ ಸಾಲ ವರ್ಗಾವಣೆ ಮಾಡಿಕೊಡಲಾಗುವುದು.
**73385 80345, 99455 22287**

**TO-LET**
2nd floor, 1BHK for rent
Beside winners career academy AVK College road, #303/4, PJ extension
2nd main road
Stadium road, Davangere.
**96111 74878**

**FLAT FOR LEASE**
3 BHK, Sqft : 1888
**AM Apartment**
**Nainika Prime Rose**
Vidyanagar Last city bus stop Davangere.
**89519 38228, 80502 22181**

**Avoid Mosquiteos**
Mosquito Nets for doors & windows
**Sri Gowri Enterprises**
#7C2, 4th cross Near Shaneshwara Temple Karur Industrial Area, P.B Road, Davanagere -577006
**72049 94628**

**ಎಲೆಕ್ಟ್ರಿಕ್ ಶಾಪ್ ಮಾರಾಟಕ್ಕಿದೆ**
ಎಲೆಕ್ಟ್ರಿಕಲ್ ಸಾಮಾನುಗಳ ಸಮೇತವಾಗಿ (ರ್‍ಯಾಕ್ + ಟೇಬಲ್‌ಗಳು) ಮಾರಾಟಕ್ಕಿವೆ.
60 ಅಡಿ ರಿಂಗ್ ರೋಡ್, ಶ್ರೀನಿವಾಸ ನಗರ, ದಾವಣಗೆರೆ ತಾ.
**99165 25870, 99866 29551**

**Receptionist wanted**
Qualification: Basic Degree
Fluent in Kannada, English & Hindi
Should be well versed in MS Office
Good written and verbal communication skills
**88842 40410**

**ಶ್ರೀ ಅಂಜನಾದ್ರಿ ಜ್ಯೋತಿಷ್ಯ ಕೇಂದ್ರ**
ಕನ್ನಡ, ತೆಲುಗು, ಹಿಂದಿ ಭಾಷೆಗಳಲ್ಲಿ ಭವಿಷ್ಯ ಮತ್ತು ಸ್ತ್ರೀ-ಪುರುಷ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಾರೆ.
**ಪಂಡಿತ್ ಶ್ರೀ ಲಕ್ಷ್ಮಿಕಾಂತ್ ಗುರೂಜಿ**
(ಆಂಧ್ರಪ್ರದೇಶ), ಲಾಯರ್ ರಸ್ತೆ, ದಾವಣಗೆರೆ.
**9740064163**

**WANTED**
* Marketing Executive
* Accountant
* godown Incharge
**63620 23451, 97434 37003**

**WANTED FRANCHISE & DISTRIBUTORS**
Malaysia's fastest growing MNC looking for Franchise & Distributors across Karnataka. Age limit 25 years & above. For Details:
**99025 59694**

**ಕುಕ್ ಬೇಕಾಗಿದ್ದಾರೆ ಬೆಂಗಳೂರಿನಲ್ಲಿ**
ವೆಜ್& ನಾನ್ ವೆಜ್ ಗೊತ್ತಿರುವ 10 ವರ್ಷ ಅನುಭವವಿರುವವರು ಬೇಕಾಗಿದ್ದಾರೆ.
ವಯಸ್ಸು 25 ರಿಂದ 35, ಸಂಬಳ 15,000 ಊಟ, ವಸತಿ ಉಚಿತ. ಸಂಪರ್ಕಿಸಿ :
**97400 98047**

**TUITIONS**
**IGCSE, ICSE, CBSE and State Board from class**
5th to 12th MCC
'A' blcok, Davangere.
**98444 92888**

**ವಾಟರ್ ಲೀಕೇಜ್**
**(ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
**95387 77582**
ಕೆಲಸ 100% ಗ್ಯಾರಂಟಿ.

**Urgent Requirement**
**Tele Calling and Marketing**
(Male / Female)
Qualification :
10th/12th (Pass/fail)
**Interview time : 10 to 5**
**93534 85785, 63600 84872**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಅಡಿಕೆ ತೋಟ ಮಾರಾಟಕ್ಕಿವೆ**
NH-4 ರಸ್ತೆಯಲ್ಲಿ 5 1/2 ವರ್ಷದ ಗಿಡ, 6 1/2 ಎಕರೆ ಅಡಿಕೆ ತೋಟ ಮಾರಾಟಕ್ಕಿದೆ. 200 ಮೀ ಒಳಗೆ ಇವೆ. 2 ಎಕರೆ ಗದ್ದೆ ಇದೆ, ಕಲ್ಲು ಬಂಡೆ ಹತ್ತಿರ.
ಏಜೆಂಟರು
**81231 15137**

**TUITIONS**
CBSE / ICSE Boards
Class 8th, 9th, 10th
**CRASH COURSES FOR**
NEET / CET / IIT - JEE
PUC I / PUC II / PCMB
***NEET Long Term / Supplementary Exams***
**97398 65711, 94822 44114**

**ಫ್ಲಾಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ, ಎ ಬ್ಲಾಕ್, ಇಂಡೋರ್ ಸ್ಟೇಡಿಯಂ ಹತ್ತಿರ ನಿರ್ಮಿಸಿರತಕ್ಕ ಅಪಾರ್ಟ್‌ಮೆಂಟ್‌ನಲ್ಲಿ 2 BHK, ಗ್ರಾನೈಟ್ ಫ್ಲೋರಿಂಗ್, ವಾರ್ಡ್‌ರೂಪ್, ದೇವರಮನೆ, ನೀರಿನ ಸೌಕರ್ಯ, ಲಿಫ್ಟ್ ಸೌಕರ್ಯ, ಕಾರ್ ಪಾರ್ಕಿಂಗ್ ಸೌಲಭ್ಯವುಳ್ಳ ಫ್ಲಾಟ್‌ಗಳು ರಿಯಾಯ್ತಿ ದರದಲ್ಲಿ ಮಾರಾಟಕ್ಕಿವೆ
**98440 65710**

**ಕೆಲಸಕ್ಕೆ ಬೇಕಾಗಿದ್ದಾರೆ**
**ಆಸ್ಪತ್ರೆಯಲ್ಲಿ ಕೆಲಸ ಮಾಡಲು ಯುವಕ-ಯುವತಿಯರಿಗೆ ಒಂದು ಸದಾವಕಾಶ**
ವಯೋಮಿತಿ : 20-35 ವರ್ಷ
ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ.
ಕೆಲಸದ ವಿವರ : ಚಿಕಿತ್ಸಾ ವಿಭಾಗಕ್ಕೆ ಥೆರಪಿಸ್ಟ್
(45 ದಿನಗಳ ಟ್ರೈನಿಂಗ್ ಉಚಿತವಾಗಿ ಕೊಟ್ಟು ತದನಂತರ ನಮ್ಮಲ್ಲೆ ಸರ್ಟಿಫಿಕೇಟ್ ಕೊಟ್ಟು ಸಂಬಳ ನೀಡಲಾಗುವುದು)
ಹೆಚ್ಚಿನ ಮಾಹಿತಿಗಾಗಿ
**8618642929, 08192-252228**

**CHANGE OF NAME**
I Umesh Shivayogi H. (Old Name) S/o Shivayogi C.H. R/o Halavarthy Village, Hebbal Post, Davanagere Tq & Dist. Karnataka-577556. I have changed my name as Umesh H.S. (New Name) Vide affidavit on 30.12.2024 sworn before Notary M. Prathaparudra, Davanagere. In future all my dealings & transaction will be in my new name. s/d Umesh H.S.

**For Sale**
KTJ Nagara,
16th cross, 2nd main
size : 18.6 x40
South face
**87925 56999**

**ಸೇಲ್ಸ್ ಬಾಯ್ಸ್/ಗರ್ಲ್ಸ್ ಅಸಿಸ್ಟೆಂಟ್ ಸೇಲ್ಸ್ ಬಾಯ್ಸ್/ಗರ್ಲ್ಸ್ ಹೆಲ್ಪರ್ಸ್ ಬೇಕಾಗಿದ್ದಾರೆ**
**ಶ್ರೀ ಮಾರುತಿ ಟೆಕ್ಸ್‌ಟೈಲ್ಸ್ & ಗಾರ್ಮೆಂಟ್ಸ್**
ಡೋ.ನಂ. 1212, ರಿಂಗ್ ರೋಡ್ ಹತ್ತಿರ, ಶಾರದಾಂಬ ದೇವಸ್ಥಾನ ವೃತ್ತ, ಎಸ್. ನಿಜಲಿಂಗಪ್ಪ ಬಡಾವಣೆ, ದಾವಣಗೆರೆ - 04
**86603 81629**
**98449 76176**

**ಕೆಲಸಕ್ಕೆ ಬೇಕಾಗಿದ್ದಾರೆ**
**ಎಸ್.ಆರ್., ಕನ್‌ಸ್ಟ್ರಕ್ಷನ್ಸ್**
ಯಾವುದೇ ಡಿಗ್ರಿ ಆಗಿರುವ ಕನ್ನಡ, ಹಿಂದಿ, ಇಂಗ್ಲಿಷ್ ಮಾತನಾಡಲು & ಕಂಪ್ಯೂಟರ್ ಜ್ಞಾನವಿರುವವರು ಕೆಲಸಕ್ಕೆ ಬೇಕಾಗಿದ್ದಾರೆ.
**ಸಮಯ : ಬೆ. 10.00 ರಿಂದ ಸಂ. 6.00**
ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
**76769 99539**

**ಕಮರ್ಷಿಯಲ್ ಇಂಡಸ್ಟ್ರಿಯಲ್ ಸೈಟು ಮಾರಾಟಕ್ಕಿದೆ**
ದಾವಣಗೆರೆ ಪಿ.ಬಿ. ರಸ್ತೆ ಮತ್ತು ಸಬ್ ರಿಜಿಸ್ಟ್ರರ್ ಆಫೀಸ್‌ನಿಂದ 150 ಅಡಿ ದೂರದಲ್ಲಿ 40 ಅಡಿ ರಸ್ತೆಗೆ ಪೂರ್ವ ಮುಖಕ್ಕೆ ಇರುವ 20000 ಅಡಿ ಹಾಲಿ ಬಾಡಿಗೆ ಬರುತ್ತಿರುವ ಏಕ ನಿವೇಶನ ಇ-ಖಾತಾ ಡೋ.ನಂ. ಇರುವ ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ : **ಹೇಮಂತ್**
**94481 80019**
**78998 72391**

**ಬೇಕಾಗಿದ್ದಾರೆ**
ಹೊಸದಾಗಿ ಪ್ರಾರಂಭವಾಗುತ್ತಿರುವ **ಹೋಂ ಅಪ್ಲೈಯನ್ಸಸ್ ಶಾಪ್‌ಗೆ** ಕೆಲಸ ಮಾಡಲು
* ಸೇಲ್ಸ್ ಗರ್ಲ್ಸ್ & ಬಾಯ್ಸ್
* ಅಕೌಂಟ್ಸ್ * ಟೆಲಿಕಾಲರ್ಸ್
ಅನುಭವವುಳ್ಳವರಿಗೆ ಪ್ರಥಮ ಆಧ್ಯತೆ
ಸ್ಥಳ : ಹರಿಹರ.
**77603 10603**
**99648 75861**


# ಕೆಎಎಸ್ ಪರೀಕ್ಷೆಯಲ್ಲಿ ಯಡವಟ್ಟು



ಬೆಂಗಳೂರು, ಡಿ. 30- ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜಕೀಯ ಹಸ್ತಕ್ಷೇಪದಿಂದಾಗಿ ಕೆಎಎಸ್ ಪೂರ್ವಭಾವಿ ಮರುಪರೀಕ್ಷೆಯಲ್ಲಿ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಮತ್ತೆ ಎಡವಟ್ಟು ಮಾಡಿದ್ದು, ಲಕ್ಷಾಂತರ ಉದ್ಯೋಗಾಕಾಂಕ್ಷಿಗಳ ಭವಿಷ್ಯ ಅತಂತ್ರವಾಗಿದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಆರೋಪಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಕಾಂಗ್ರೆಸ್ ಸರ್ಕಾರ ಮರುಪರೀಕ್ಷೆಯಲ್ಲೂ ಮುಗ್ಗರಿಸಿದೆ, ಆಗಸ್ಟ್‌ನಲ್ಲಿ ನಡೆದ 2023-24ನೇ ಸಾಲಿನ ಕೆಪಿಎಸ್‌ಸಿ ಗೆಜೆಟೆಡ್ ಪ್ರೊಬೇಷನರ್ ಪೂರ್ವಭಾವಿ ಪರೀಕ್ಷೆಯಲ್ಲಿ ಭಾರೀ ಎಡವಟ್ಟು ಕಂಡುಬಂದಿತ್ತು, ಅಭ್ಯರ್ಥಿಗಳ ಆಕ್ರೋಶಕ್ಕೆ ಮಣಿದು ಮರು ಪರೀಕ್ಷೆ ನಡೆಸಲಾಗಿತ್ತು ಎಂದಿದ್ದಾರೆ.

ಭಾನುವಾರ ನಡೆದ ಮರುಪರೀಕ್ಷೆಯಲ್ಲೂ ಭಾಷಾಂತರದಲ್ಲಿ ಲೋಪ, ಒಎಂಆರ್ ಶೀಟ್ ಮತ್ತು ನೋಂದಣಿ ಸಂಖ್ಯೆ ಅದಲು-ಬದಲು, ಕೆಲವೆಡೆ 45 ನಿಮಿಷ ತಡವಾಗಿ ಪರೀಕ್ಷೆ ಆರಂಭ ಸೇರಿದಂತೆ ಸಾಲು ಸಾಲು ಲೋಪಗಳು ಅಭ್ಯರ್ಥಿಗಳ ಅಸಮಾಧಾನಕ್ಕೆ ಕಾರಣವಾಗಿವೆ.

ಮರುಪರೀಕ್ಷೆಗೆ ನೋಂದಣಿಯಾಗಿದ್ದ 2.10 ಲಕ್ಷ ಅಭ್ಯರ್ಥಿಗಳ ಪೈಕಿ ಕೇವಲ ಒಂದು ಲಕ್ಷ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಆಗಸ್ಟ್‌ನಲ್ಲಿ ನಡೆದ ಪೂರ್ವಭಾವಿ ಪರೀಕ್ಷೆಯಲ್ಲಿ ಶೇ.62.52ರಷ್ಟಿದ್ದ ಹಾಜರಾತಿ, ಮರುಪರೀಕ್ಷೆಯಲ್ಲಿ ಶೇ.47.7ಕ್ಕೆ ಕುಸಿದಿದೆ, ಇದರರ್ಥ, ಅಭ್ಯರ್ಥಿಗಳು ಕಾಂಗ್ರೆಸ್ ಸರ್ಕಾರ ಮತ್ತು ಕೆಪಿಎಸ್‌ಸಿ ಮೇಲೆ ನಂಬಿಕೆ ಕಳೆದುಕೊಂಡಿದ್ದಾರೆ ಎಂದರು.

ಕಾಂಗ್ರೆಸ್ ಸರ್ಕಾರಕ್ಕೆ ಸರಿಯಾಗಿ ಪರೀಕ್ಷೆ ನಡೆಸಲು

## ಹೊನ್ನಾಳಿ : 8 ಲಕ್ಷ ರೂ.ಗಳಿಗೂ ಹೆಚ್ಚು ಮೌಲ್ಯದ ಹಣ, ಒಡವೆ ಕಳವು

ಹೊನ್ನಾಳಿ, ಡಿ.30- ಇಲ್ಲಿನ ಶಾದಿ ಮಹಲ್ ಎದುರಿನ ಮಹಾಲಕ್ಷ್ಮಿ ಮೆಡಿಕಲ್ ಸ್ಟೋರ್ಸ್‌ನ ಮಂಜುಳಾ ಅಶೋಕ್ ಅವರ ಮನೆಯಲ್ಲಿ 60,000 ನಗದು ಸೇರಿದಂತೆ 8,46,000 ಮೌಲ್ಯದ ಬಂಗಾರದ ಒಡವೆಗಳು ಕಳ್ಳತನ ಆಗಿರುವ ಬಗ್ಗೆ ವರದಿಯಾಗಿದೆ.

40 ಗ್ರಾಂ ಎರಡು ಬಳೆ, 50 ಗ್ರಾಂ 3 ಸರ , 2 ಗ್ರಾಂ ನ ಆರು ಉಂಗುರ 15 ಗ್ರಾಂ ನವರತ್ನ ಉಂಗುರ ಹತ್ತು ಗ್ರಾಂ 1 , 3 ಗ್ರಾಂ 2 ಉಂಗುರ, 20 ಗ್ರಾಂ ಜುಮಕಿ, 4 ಗ್ರಾಂ ಕಿವಿವೋಲೆ, 4 ಗ್ರಾಂ ಕಿವಿ ರಿಂಗ್, ನಾಲ್ಕು ಗ್ರಾಂ ಮುರುಗ, ಎರಡು ಗ್ರಾಂ ಲಕ್ಷ್ಮಿ ಪದಕ, ಬಂಗಾರದ ಇತರೆ ತುಣುಕು ಸೇರಿದಂತೆ 8,46,000 ಮೌಲ್ಯದ ಒಡವೆಗಳು ಕಳ್ಳತನವಾಗಿರುವ ಬಗ್ಗೆ ವರದಿಯಾಗಿದೆ. ಒಂದೇ ಕಳ್ಳರ ಗುಂಪು ಇಂದು 2 ಮನೆಗಳ ಕಳ್ಳತನ ನಡೆಸಿರುವ ಬಗ್ಗೆ ಶಂಕೆ ವ್ಯಕ್ತವಾಗಿದೆ.

## ಚಂದ್ರಬಾಬು ನಾಯ್ಡು ದೇಶದ ಅತ್ಯಂತ ಶ್ರೀಮಂತ ಸಿಎಂ

**(1ನೇ ಪುಟದಿಂದ)** ಎಂದು ವರದಿ ತಿಳಿಸಿದೆ. ದೇಶದ 31 ಮುಖ್ಯಮಂತ್ರಿಗಳ ಒಟ್ಟಾರೆ ಆಸ್ತಿ ಮೌಲ್ಯ 1630 ಕೋಟಿ ರೂ. ಆಗಿದೆ. ಅರುಣಾಚಲ ಪ್ರದೇಶದ ಮುಖ್ಯಮಂತ್ರಿ ಪೇಮ ಖಂಡು ಅವರು ದೇಶದ ಎರಡನೇ ಶ್ರೀಮಂತ ಮುಖ್ಯಮಂತ್ರಿ ಆಗಿದ್ದು ಅವರ ಆಸ್ತಿ ಮೌಲ್ಯ 332 ಕೋಟಿ ರೂ. ಆಗಿದೆ. ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾ ಮಯ್ಯ ಅವರು 51 ಕೋಟಿ ರೂ ಮೌಲ್ಯದ ಆಸ್ತಿ ಘೋಷಣೆ ಮಾಡಿಕೊಂಡಿದ್ದು ಅವರು ಮೂರನೇ ಸ್ಥಾನದಲ್ಲಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ ಅವರ ಆಸ್ತಿ ಮೌಲ್ಯ 55 ಲಕ್ಷ ರೂ. ಆಗಿದೆ.

# ಹೊಸ ವರ್ಷ ಸಂಭ್ರಮ : ಕುಡಿದು ತೊಂದರೆ ಕೊಟ್ಟರೆ ಕಠಿಣ ಕ್ರಮ



ಎಚ್ಚರಿಕೆ ನೀಡಿದ ಎಸ್ಪಿ ಉಮಾ ಪ್ರಶಾಂತ್

ದಾವಣಗೆರೆ, ಡಿ.30- ಹೊಸ ವರ್ಷದ ಆಚರಣೆಯ ಹಿನ್ನೆಲೆ ಜಿಲ್ಲೆಯಾದ್ಯಂತ ಜಿಲ್ಲಾ ಪೊಲೀಸ್ ವತಿಯಿಂದ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ.

ಡಿಸೆಂಬರ್ 31ರ ರಾತ್ರಿ ಹೊಸ ವರ್ಷಾಚರಣೆಯ ಕಾರ್ಯ ಕ್ರಮಗಳಲ್ಲಿ ಆಯೋ ಜಕರು, ಸಂಘಟಕರು ಹಾಗೂ ಸಾರ್ವ ಜನಿಕರು ಪೊಲೀಸ್ ಇಲಾಖೆಯ ನಿಯಮ ಉಲ್ಲಂಘಿಸಿದ್ದಲ್ಲಿ, ಅಂತವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ಅವರು ಎಚ್ಚರಿಕೆ ನೀಡಿದ್ದಾರೆ.

ಹೊಸ ವರ್ಷಾಚರಣೆ ವೇಳೆ ಕಾರ್ಯ ಕ್ರಮದ ಆಯೋಜಕರು, ಸಾರ್ವಜನಿಕರು ನಿಗಧಿತ ಸಮಯಕ್ಕೆ ಪಾರ್ಟಿಯನ್ನು ಮುಕ್ತಾಯ ಮಾಡಬೇಕು ಮತ್ತು ಸಂಚಾರ ನಿಯಮ ಉಲ್ಲಂಘನೆ, ಕುಡಿದು ವಾಹನ ಚಾಲನೆ, ವಾಹನಗಳಲ್ಲಿ ಹೆಚ್ಚಿನ ಜನರು ಸವಾರಿ ಮಾಡುವುದು ಹಾಗೂ ವ್ಹೀಲಿಂಗ್ ಮಾಡುವ ದೃಶ್ಯ ಕಂಡು ಬಂದಲ್ಲಿ ಅಂತವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.

ಹಿರಿಯ ನಾಗರಿಕರು, ಮಹಿಳೆಯರು, ವಿದ್ಯಾರ್ಥಿಗಳು ಹಾಗೂ ಮನೆಯ ಅಕ್ಕ-ಪಕ್ಕದವರಿಗೆ ತೊಂದರೆ ಮಾಡಬಾರದು. ಯುವಕರು ಅಶ್ಲೀಲವಾಗಿ, ಅಸಭ್ಯವಾಗಿವರ್ತಿಸಬಾರದು, ಮಹಿಳೆಯರಿಗೆ ಚುಡಾಯಿಸಬಾರದು. ಮತ್ತು ಕಾರ್ಯಕ್ರಮಗಳ ಆಯೋಜಕರುಗಳು ಕಡ್ಡಾಯವಾಗಿ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಪಾನಮತ್ತರಾಗಿ ನಾಗರಿಕರಿಗೆ ತೊಂದರೆ ಮಾಡಬಾರದು. ಅತೀ ವೇಗದ ವಾಹನ ಚಾಲನೆ ಮಾಡಬಾರದು. ಸಾರ್ವಜನಿಕ ಸ್ಥಳ ಹಾಗೂ ಜನಸಂದಣಿ ಪ್ರದೇಶಗಳಲ್ಲಿ ಪಟಾಕಿ ಸಿಡಿಸಬಾರದು ಮತ್ತು ಅಗ್ನಿ ಅವಘಡ ಆಗದಂತೆ ಮುನ್ನೆಚ್ಚರಿಕೆಯಿಂದ ಇರಬೇಕು. ಕರ್ಕಶ ಶಬ್ದ ಹಾಗೂ ಡಿ.ಜೆ ಸೌಂಡ್ಸ್ ಬಳಸಬಾರದು. ಲೌಡ್ ಸ್ಪೀಕರ್ ಬಳಸುವಾಗ ನ್ಯಾಯಾಲಯ ಹಾಗೂ ಸರ್ಕಾರದ ಆದೇಶ ಉಲ್ಲಂಘನೆ ಮಾಡಬಾರದು ಮತ್ತು ಶಬ್ದ ಮಾಲಿನ್ಯ ಆಗದಂತೆ ಧ್ವನಿ ವರ್ಧಕ ಬಳಸಬೇಕು.

ಸಾಮಾಜಿಕ ಜಾಲತಾಣಗಳಲ್ಲಿ ಕೋಮು ಪ್ರಚೋದಕ, ಧಾರ್ಮಿಕ ನಿಂದನೆ ಹಾಗೂ ಸುಳ್ಳು ಸುದ್ದಿ ಹರಡಿಸಬಾರದು. ಅಹಿತಕರ ಘಟನೆಗಳು ಕಂಡುಬಂದಲ್ಲಿ ತುರ್ತು ಸಹಾಯ ವಾಣಿ 112ಕ್ಕೆ ಕರೆ ಮಾಡಬೇಕು ಹಾಗೂ ಸ್ಥಳೀಯ ಪೊಲೀಸ್ ಠಾಣೆ, ಪೊಲೀಸ್ ಅಧಿಕಾರಿ ಅಥವಾ ಸಿಬ್ಬಂದಿಗೆ ಮಾಹಿತಿ ನೀಡಬೇಕು. ಹೊಸ ವರ್ಷದ ಆಚರಣೆ ನಡೆಸುವ ಆಯೋಜಕರು ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡಿರಬೇಕು. ನೈತಿಕ ಪೊಲೀಸ್ ಗಿರಿ ಮತ್ತು ಅನುಚಿತ ವರ್ತನೆ ಮಾಡುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು.

**ಪೊಲೀಸ್ ಇಲಾಖೆ ಕೈಗೊಂಡ ಕ್ರಮ :** ನಗರದ ವಿವಿಧ ಕಡೆಗಳಲ್ಲಿ ಚೆಕ್ ಪೋಸ್ಟ್‌ಗಳನ್ನು ತೆರೆದಿದ್ದು, ಕುಡಿದು ವಾಹನ ಚಾಲನೆ ಮಾಡುವವರು, ತ್ರಿಬಲ್ ರೈಡಿಂಗ್ ಹಾಗೂ ವ್ಹೀಲಿಂಗ್ ಮಾಡುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು.

ದಾವಣಗೆರೆ ನಗರ ಸೇರಿದಂತೆ ಜಿಲ್ಲೆಯ ತಾಲ್ಲೂಕು ಕೇಂದ್ರಗಳಾದ ಹರಿಹರ, ಹೊನ್ನಾಳಿ, ಚನ್ನಗಿರಿ, ಜಗಳೂರು, ನ್ಯಾಮತಿ ಪಟ್ಟಣಗಳಲ್ಲಿ ಸೂಕ್ತ ಪೊಲೀಸ್ ಬಂದೋ ಬಸ್ತ್ ಮಾಡಲಾಗಿದ್ದು, ಜಿಲ್ಲೆಯಾದ್ಯಂತ ಹೊಸ ವರ್ಷಾಚರಣೆ ಸಂಬಂಧ ಅಗತ್ಯ ಪೊಲೀಸ್ ಅಧಿಕಾರಿ-ಸಿಬ್ಬಂದಿಯನ್ನು ನಿಯೋಜಿಸಿದ್ದು, ಆಯ ಕಟ್ಟಿನ ಸ್ಥಳಗಳಲ್ಲಿ ಕೆಎಸ್‌ಆರ್‌ಪಿ ಮತ್ತು ಡಿಎಆರ್ ತುಕಡಿಗಳನ್ನು ನಿಯೋಜಿಸಲಾಗಿದೆ.

ಜಿಲ್ಲೆಯಲ್ಲಿ ಬಾರ್ ಮತ್ತು ರೆಸ್ಟೋರೆಂಟ್, ವೈನ್ ಶಾಪ್‌ಗಳು ನಿಗದಿಪಡಿಸಿದ ಸಮಯಕ್ಕೆ ಬಂದ್ ಮಾಡಲು ಸೂಚಿಸಿದ್ದು, ನಗರದ ಹೊರವಲಯಗಳಾದ ಕೊಂಡಜ್ಜಿ ಕೆರೆ, ದೇವರ ಬೆಳಕೆರೆ ಚೆಕ್ ಡ್ಯಾಂ ಮತ್ತು ವಿವಿಧೆಡೆ ಪೊಲೀಸ್ ನಿಯೋಜನೆ ಮಾಡಲಾಗಿದೆ.

ಕಾರ್ಯಕ್ರಮಗಳ ಆಯೋಜಕರುಗಳಿಗೆ ಈಗಾಗಲೇ ಯಾವುದೇ ಅವಘಡಗಳು ಸಂಭವಿಸದಂತೆ ಸೂಕ್ತ ಪೂರ್ವ ಸಿದ್ದತೆ ಮತ್ತು ಮುಂಜಾಗ್ರತೆ ಕ್ರಮ ತೆಗೆದುಕೊಳ್ಳಲು ಸೂಚನೆ ನೀಡಲಾಗಿದೆ. ನಗರದ ಅಗತ್ಯವಿರುವ ಸೂಕ್ಷ್ಮ ಪ್ರದೇಶಗಳಲ್ಲಿ ಡ್ರೋನ್ ನಿಗಾ ವಹಿಸಲಾಗುವುದು ಎಂದು ಎಸ್ಪಿ ಉಮಾ ಅವರು ಪತ್ರಿಕಾ ಹೇಳಿಕೆಯಲ್ಲಿ ವಿವರಿಸಿದ್ದಾರೆ.

# ಮಹಾ ಕುಂಭಮೇಳಕ್ಕಾಗಿ 1.60 ಲಕ್ಷ ಟೆಂಟ್

**(1ನೇ ಪುಟದಿಂದ)** ವಪಾತ್ರದಿಂದ ಬದಲಾಗಿದೆ. ಹೀಗಾಗಿ ಮಹಾ ಕುಂಭಮೇಳಕ್ಕೆ ಲಭ್ಯವಾಗುವ ಜಾಗ ಕಡಿಮೆಯಾಗಿದೆ.

ಅಲ್ಲದೇ ಕಳೆದ ಐದು ವರ್ಷಗಳಲ್ಲಿ 3,200 ಹೆಕ್ಟೇರ್ ಪ್ರದೇಶ ಒತ್ತುವರಿಗೂ ಗುರಿಯಾಗಿದೆ. ಒತ್ತುವರಿಯಾಗಿರುವ ಈ ಜಾಗವನ್ನು ಪಡೆಯುವ ಜೊತೆಗೆ ಹೆಚ್ಚುವರಿಯಾಗಿ 800 ಹೆಕ್ಟೇರ್ ಜಾಗ ಪಡೆದು ಮೇಳಕ್ಕೆ ಸಿದ್ಧತೆ ನಡೆಸಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.

ಬರುವ ಜನವರಿ 10ರ ಒಳಗೆ ಮೇಳದ ಸಿದ್ಧತೆಗಳೆಲ್ಲಾ ಪೂರ್ಣಗೊಳ್ಳಲಿವೆಯೇ ಎಂಬ ಪ್ರಶ್ನೆಗೆ ಉತ್ತರಿಸಿರುವ ಹಿರಿಯ ಅಧಿಕಾರಿಯೊಬ್ಬರು, ಮೇಳದ ಸಿದ್ಧತೆಯು ಬೃಹತ್ ಭಾರತೀಯ ಮದುವೆಯ ಸಿದ್ಧತೆಯ ರೀತಿ ನಡೆದಿದೆ. 6 ತಿಂಗಳ ಹಿಂದೆಯೇ ಸಿದ್ಧತೆ ಆರಂಭಿಸಿದರೂ ಸಹ ದಿಬ್ಬಣ ಬರುವವರೆಗೂ ಕೆಲಸಗಳು ನಡೆದೇ ಇರುತ್ತವೆ ಎಂದಿದ್ದಾರೆ. ಆದರೂ ಮೇಳದ ವೇಳೆ ಎಲ್ಲಾ ಸಿದ್ಧತೆಗಳು ಪೂರ್ಣಗೊಂಡಿರಲಿವೆ ಎಂದವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕಳೆದ ಅಕ್ಟೋಬರ್ ತಿಂಗಳಲ್ಲೇ ಕುಂಭಮೇಳದ ಸಿದ್ಧತೆ ಆರಂಭವಾಗಿತ್ತು. ನೀರಾವರಿ ಇಲಾಖೆಯ ಪರಿಣಿತರು ಹಾಗೂ ಗುವಾಹತಿ ಐಐಟಿ ಪರಿಣಿತರು ಜೊತೆಯಾಗಿ ನದಿಗಳ ತಟದಲ್ಲಿ ಹೆಚ್ಚುವರಿ ಘಾಟ್‌ಗಳನ್ನು ನಿರ್ಮಿಸುವ ಯೋಜನೆ ರೂಪಿಸಿದ್ದರು.

ನದಿ ಕೊರೆತದ ಕಾರಣದಿಂದಾಗಿ ಸಂಗಮದಲ್ಲಿ ಗಂಗಾನದಿಯ ಪಾತ್ರ 200 ರಿಂದ 500 ಮೀಟರ್‌ಗಳವರೆಗೆ ಬದಲಾಗಿದೆ.

ಇನ್ನು 15 ದಿನಗಳಲ್ಲೇ ಮಕರ ಸಂಕ್ರಾಂತಿ ಬರಲಿದ್ದು, ಅಂದು ಪವಿತ್ರ ಸ್ನಾನ ನಡೆಯಲಿದೆ. ಅಷ್ಟರೊಳಗೆ ಎಲ್ಲಾ ಸಿದ್ಧತೆ ಮಾಡಿಕೊಳ್ಳಲು ರಭಸದಿಂದ ಕಾಮಗಾರಿಗಳು ನಡೆದಿವೆ. ಉತ್ತರ ಪ್ರದೇಶ ಸರ್ಕಾರಕ್ಕೆ ಕುಂಭಮೇಳವು ಕೇವಲ ಧಾರ್ಮಿಕ ಉತ್ಸವ ಅಷ್ಟೇ ಅಲ್ಲದೆ ಪ್ರತಿಷ್ಠೆಯ ವಿಷಯವೂ ಆಗಿದೆ. ಈ ವರ್ಷ ಅಯೋಧ್ಯೆಯ ರಾಮಮಂದಿರ ಉದ್ಘಾಟನೆ ವೇಳೆ ಎಷ್ಟು ಗಂಭೀರವಾಗಿ ಸಿದ್ಧತೆ ನಡೆದಿದ್ದವೋ ಅದೇ ಗಂಭೀರತೆಯಲ್ಲಿ ಮೇಳದ ಸಿದ್ಧತೆಗಳೂ ನಡೆದಿವೆ.

2019ರಲ್ಲಿ ಕುಂಭಮೇಳದಲ್ಲಿ 24 ಕೋಟಿ ಜನರು ಭಾಗವಹಿಸಿದ್ದರು. ಈ ಬಾರಿ 40 ಕೋಟಿ ಜನ ಭಾಗವಹಿಸುವ ನಿರೀಕ್ಷೆ ಇದೆ ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ತಿಳಿಸಿದ್ದಾರೆ.

ಈ ಪ್ರಮಾಣದ ಯಾತ್ರಿಗಳಿಗೆ ಸೌಲಭ್ಯ ಒದಗಿಸಲು 4 ಸಾವಿರ ಹೆಕ್ಟೇರ್ ಜಾಗ ಗುರುತಿಸಲಾಗಿದೆ. ಇದನ್ನು 25 ವಲಯಗಳಾಗಿ ವಿಂಗಡಿಸಲಾಗಿದೆ. ನದಿಗಳ ಎರಡೂ ತಟಗಳಿಗೆ ಜನರು ಸುಗಮವಾಗಿ ತೆರಳಲು 30 ತಾತ್ಕಾಲಿಕ ಸೇತುವೆಗಳನ್ನೂ ನಿರ್ಮಿಸಲಾಗುತ್ತಿದೆ.

ಲೋಕೋಪಯೋಗಿ ಇಲಾಖೆಯು 90 ರಸ್ತೆಗಳ ವಿಸ್ತರಣೆ ಕಾರ್ಯದಲ್ಲಿ ತೊಡಗಿದೆ. 1250 ಕಿ.ಮೀ. ಕೊಳವೆ ಮಾರ್ಗದ ಮೂಲಕ 50 ಸಾವಿರ ನಲ್ಲಿಗಳನ್ನು ಅಳವಡಿಸಲಾಗುತ್ತಿದೆ

ಆರೋಗ್ಯ ಸೇವೆಯ ಬಗ್ಗೆಯೂ ಹೆಚ್ಚಿನ ಗಮನ ಹರಿಸಲಾಗುತ್ತಿದೆ. 100 ಬೆಡ್‌ಗಳ ಮುಖ್ಯ ಆಸ್ಪತ್ರೆ ಸ್ಥಾಪಿಸಲಾಗಿದೆ. 20 ಬೆಡ್‌ಗಳ ಸಣ್ಣ ಆಸ್ಪತ್ರೆಗಳು, 25 ಚಿಕಿತ್ಸಾ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ. ಇದರ ಜೊತೆಗೆ 125 ಆಂಬ್ಯುಲೆನ್ಸ್‌ಗಳನ್ನು ಸಿದ್ಧವಾಗಿರಿಸಲಾಗಿದೆ. ಆರೋಗ್ಯ ಸೇವೆಗೆ ರಾಯ್‌ಬರೇಲಿಯಲ್ಲಿರುವ ಎಐಐಎಂಎಸ್ ಸಹ ಕೈ ಜೋಡಿಸಿದೆ.

# ಕರ್ನಾಟಕಕ್ಕೆ ಆತ್ಮಹತ್ಯೆ ಭಾಗ್ಯ

## ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ವಿಜಯೇಂದ್ರ ಆಗ್ರಹ





ಬೆಂಗಳೂರು, ಡಿ. 30- ಗುತ್ತಿಗೆದಾರ ಸಚಿನ್ ಪಾಂಚಾಳ್ ಸಾವು ಪ್ರಕರಣದ ಸಂಬಂಧ ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆ ಪಡೆದು, ಘಟನೆಯನ್ನು ಸಿಬಿಐನಿಂದ ತನಿಖೆ ಮಾಡಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇಂದಿಲ್ಲಿ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಖರ್ಗೆ ಕುಟುಂಬದ ಆಪ್ತ ರಾಜು ಕಪನೂರ್ ಟೆಂಡರ್ ಮಾಡಿಕೊಡಲು ಶೇ.5ರಷ್ಟು ಹಣಕ್ಕೆ ಬೇಡಿಕೆ ಇಟ್ಟಿದ್ದು, ಪ್ರಿಯಾಂಕ್ ಖರ್ಗೆ ಹೇಳಿದ ಮಾತನ್ನು ಮೀರುವುದಿಲ್ಲ, ಸಚಿವರ ಬೆಂಬಲ ಇದೆ ಎಂಬುದಾಗಿ ಹೇಳಿದ್ದರೆಂದು ಸಚಿನ್ ತಮ್ಮ ಡೆತ್‌ನೋಟ್‌ನಲ್ಲಿ ಬರೆದಿಟ್ಟಿದ್ದಾರೆ ಎಂದು ಮಾಹಿತಿ ನೀಡಿದರು. ಸಿಬಿಐ ತನಿಖೆಗೆ ಸಚಿನ್ ಕುಟುಂಬವೂ ಒತ್ತಾಯಿಸಿದೆ, ಈ ಹಿಂದೆ, ಸಚಿವ ನಾಗೇಂದ್ರ ವಾಲ್ಮೀಕಿ ನಿಗಮದ ಹಗರಣದಲ್ಲಿ ಸಿಲುಕಿ ರಾಜೀನಾಮೆ ಕೊಟ್ಟಿದ್ದು, ಒಂದು ಕ್ಷಣವೂ ತಡ ಮಾಡದೆ, ಪ್ರಿಯಾಂಕ್ ಖರ್ಗೆ ರಾಜೀನಾಮೆ ಪಡೆದುಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.

ಹಿಂದೆ ಬಿಜೆಪಿ ಅಧಿಕಾರದಲ್ಲಿದ್ದಾಗ ಸಚಿವ ಕೆ.ಎಸ್.ಈಶ್ವರಪ್ಪ ಅವರ ಮೇಲೆ ಆರೋಪ ಬಂದಾಗ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದನ್ನು ಪ್ರಿಯಾಂಕ್ ಖರ್ಗೆ ಮರೆಯಬಾರದು, ಮಡಿಕೇರಿಯಲ್ಲಿ ಪೊಲೀಸ್ ಅಧಿಕಾರಿ ಗಣಪತಿ ಆತ್ಮಹತ್ಯೆ ಮಾಡಿಕೊಂಡಾಗಲೂ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದರು, ಅಲ್ಲದೆ, ಅಂದಿನ ಗೃಹ ಸಚಿವ ಜಾರ್ಜ್ ಸಹ ರಾಜೀನಾಮೆ ನೀಡಿ, ಸಿಬಿಐ ತನಿಖೆ ಎದುರಿಸಿದ್ದರು.

ಸಚಿನ್ ಕುಟುಂಬಕ್ಕೆ ಕೂಡಲೇ ಭದ್ರತೆ ಕೊಡಬೇಕು, ಒಂದು ಕೋಟಿ ರೂ. ಪರಿಹಾರ ನೀಡಬೇಕು, ಕುಟುಂಬದಲ್ಲಿ ಹಲವರು ವಿದ್ಯಾವಂತರಿದ್ದು, ಒಬ್ಬ ಸದಸ್ಯರಿಗೆ ಸರ್ಕಾರಿ ನೌಕರಿ ಕೊಡಬೇಕು ಎಂದರು.

ಡೆತ್‌ನೋಟ್‌ನಲ್ಲಿ ಸಿದ್ಧಲಿಂಗ ಸ್ವಾಮೀಜಿ, ಶಾಸಕ ಬಸವರಾಜ ಮತ್ತಿಮೂಡ, ಕಲಬುರಗಿಯ ಬಿಜೆಪಿ ನಾಯಕರಾದ ಚಂದುಪಾಟೀಲ್, ಮಣಿಕಂಠ ರಾಠೋಡ್ ಕೊಲೆಗೆ ಸಂಚು ರೂಪಿಸಿದ್ದಾಗಿ ತಿಳಿಸಲಾಗಿದೆ. ಆದ್ದರಿಂದ, ಇದು ಗಂಭೀರ ವಿಚಾರವಾಗಿದ್ದು, ಸಿಬಿಐ ತನಿಖೆ ಅತ್ಯಗತ್ಯವಾಗಿದೆ, ರಾಜ್ಯ ಪೊಲೀಸ್ ಇಲಾಖೆ ರಾಜಕೀಯವಾಗಿ ಪ್ರಬಲವಾಗಿರುವ ಖರ್ಗೆ ಕುಟುಂಬದ ವಿರುದ್ಧ ನಿಷ್ಪಕ್ಷಪಾತ ತನಿಖೆ ನಡೆಸಲು ಸಾಧ್ಯವಿಲ್ಲ.

ಆರೋಪ ಎದುರಿಸುತ್ತಿರುವ ಪ್ರಿಯಾಂಕ್ ಖರ್ಗೆ ಹಲವು ಇಲಾಖೆಗೆ ಸಚಿವರು, ಬಹಳ ಜ್ಞಾನಿ, ಮೇಧಾವಿ, ಬುದ್ಧಿವಂತರು, ಪ್ರಭಾವಿ, ಶಕ್ತಿಶಾಲಿ ಮುಖಂಡರೂ ಆಗಿದ್ದಾರೆ, ಸುಪ್ರೀಂ ಕೋರ್ಟ್, ಹೈಕೋರ್ಟ್ ತೀರ್ಪಿನಂತೆ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಟೀಕಿಸಿದರು.

ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಸಚಿನ್ ಪಾಂಚಾಳ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಾಕಿದಾಗ, ಇಬ್ಬರು ಸಹೋದರಿಯರಾದ ಸವಿತಾ, ಸುನೀತಾ ಮಧ್ಯಾಹ್ನ 2-15ಕ್ಕೆ ಪೊಲೀಸ್ ಠಾಣೆಗೆ ಧಾವಿಸಿ, ಅವರ ಪ್ರಾಣ ಉಳಿಸುವಂತೆ ಗೋಗರೆದರೂ ಕಿಂಚಿತ್ತೂ ಲೆಕ್ಕಿಸದೆ, ಪಿಎಸ್‌ಐ ಅಮಾನವೀಯವಾಗಿ ನಡೆದುಕೊಂಡಿದ್ದಾರೆ, ಅಲ್ಲದೆ, ಸಹೋದರಿಯರನ್ನು ಇತರೆ ಪೊಲೀಸ್ ಠಾಣೆಗಳಿಗೆ ತಿರುಗಾಡಿಸಿದ್ದಾರೆ.

ಪೊಲೀಸ್ ಠಾಣೆಗೆ ಹೋಗಿದ್ದ ಹೆಣ್ಮಕ್ಕಳ ಜೊತೆ ಕೆಟ್ಟದಾಗಿ ನಡೆದುಕೊಳ್ಳಲಾಯಿತು, ದೂರು ದಾಖಲಿಸಿಕೊಂಡು ಮೊಬೈಲ್ ಟ್ರ್ಯಾಕ್ ಮಾಡಿದ್ದರೆ ನನ್ನ ತಮ್ಮ ಉಳಿಯುತ್ತಿದ್ದ ಎಂದು ಆ ಸೋದರಿಯರು ತಿಳಿಸಿದ್ದಾರೆ.

ಹೆಣ್ಮಕ್ಕಳಿಗೆ ಹೀಯಾಳಿಸಿ, ಅಪಮಾನ ಮಾಡಿ ನಿಂದಿಸಿದ್ದು ಅಕ್ಷಮ್ಯ ಅಪರಾಧ, ಅಧಿಕಾರಿಗಳ ಕಾಲಹರಣದಿಂದ ಘಟನೆ ಸಂಭವಿಸಿದೆ, ಪೊಲೀಸ್ ಠಾಣೆಗಳು ಕಾಂಗ್ರೆಸ್ ಕಚೇರಿಗಳಾಗಿವೆ, ರಿಪಬ್ಲಿಕ್ ಆಫ್ ಗುಲ್ಬರ್ಗ ಜಿಲ್ಲೆ ಯಾರ ಕಪಿಮುಷ್ಟಿಯಲ್ಲಿದೆ ಎಂಬುದನ್ನು ಅಲ್ಲಿನ ಜನ ಹೇಳುತ್ತಿದ್ದಾರೆ.

ಜಿಲ್ಲೆಯಲ್ಲಿ ಅನೇಕ ಆತ್ಮಹತ್ಯೆ, ಕೊಲೆ ಪ್ರಕರಣಗಳು ನಡೆದಿವೆ, ಅವುಗಳನ್ನು ಮುಚ್ಚಿಹಾಕಿದ ಷಡ್ಯಂತ್ರವೂ ಹಿಂದೆ ನಡೆದಿದೆ. ಕಾಂಗ್ರೆಸ್ ನಾಯಕರು ಬೆಳಗಿನ ಜಾವ 3 ಗಂಟೆಗೆ ನೊಂದ ಕುಟುಂಬವನ್ನು ಭೇಟಿ ಮಾಡಿ, ಸಮಾಧಾನ ಹೇಳಿ, ಸುಮ್ಮನಾಗುವಂತೆ ಬೆದರಿಕೆ ಹಾಕಿದ್ದಾರೆ, ಜಿಲ್ಲೆಯ ಪೊಲೀಸ್ ಇಲಾಖೆ ಖರ್ಗೆ ಕುಟುಂಬದ ಹಿಡಿತದಲ್ಲಿದೆ ಎಂದು ಆರೋಪಿಸಿದರು.

ಭ್ರಷ್ಟಾಚಾರ ಹಗರಣ ಹಿನ್ನೆಲೆಯಲ್ಲಿ ವಾಲ್ಮೀಕಿ ನಿಗಮದ ಅಕೌಂಟೆಂಟ್ ಚಂದ್ರಶೇಖರ್ ಆತ್ಮಹತ್ಯೆ ಮಾಡಿಕೊಂಡರು. ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಪಿ.ಎ. ಹೆಸರು ಬರೆದಿಟ್ಟು ರುದ್ರಣ್ಣ ಯಡವಣ್ಣವರ್ ಆತ್ಮಹತ್ಯೆ ಮಾಡಿಕೊಂಡರು, ದಾವಣಗೆರೆಯಲ್ಲಿ ಗುತ್ತಿಗೆದಾರರೊಬ್ಬರು ಬಾಕಿ ಹಣ ಸಿಗದೆ ಆತ್ಮಹತ್ಯೆ ಮಾಡಿಕೊಂಡರು, ಮಾಗಡಿಯಲ್ಲಿ ಕ್ರಷರ್ ಲಾರಿ ಮಾಲೀಕರೊಬ್ಬರು ಲಂಚ ಕೊಡಲಾಗದೆ ಆತ್ಮಹತ್ಯೆ ಮಾಡಿಕೊಂಡರು. ಯಾದಗಿರಿ ಪಿಎಸ್‌ಐ ಪರಶುರಾಮ್, ಸ್ಥಳೀಯ ಶಾಸಕರ ಪುತ್ರನ ಒತ್ತಡ ತಡೆಯಲಾಗದೆ ಆತ್ಮಹತ್ಯೆ ಮಾಡಿಕೊಂಡರು.

ಕಾಂಗ್ರೆಸ್ ಆಡಳಿತದಲ್ಲಿ ಸರ್ಕಾರಿ ಪ್ರಾಯೋಜಿತ ಆತ್ಮಹತ್ಯೆಗಳು ದಿನೇ ದಿನೇ ಹೆಚ್ಚುತ್ತಿವೆ, ಸರ್ಕಾರ, ಸಚಿವರು, ಆಡಳಿತರೂಢ ಶಾಸಕರ ಕುಮ್ಮಕ್ಕಿನಿಂದ ಸರಣಿ ಆತ್ಮಹತ್ಯೆ ಪ್ರಕರಣಗಳು ಘಟಿಸುತ್ತಿವೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ಕರ್ನಾಟಕಕ್ಕೆ ಆತ್ಮಹತ್ಯೆ ಭಾಗ್ಯ ದಯಪಾಲಿಸಿದೆ ಎಂದು ಆರೋಪಿಸಿದರು.

**ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ದಾವಣಗೆರೆ.**

**ಅಸಲು ದಾವಾ ನಂ. 250/2012**

**ವಾದಿ :** ಚನ್ನಬಸಯ್ಯ ; **ವಿರುದ್ಧ ಪ್ರತಿವಾದಿಗಳು :** ಶಕುಂತಲಮ್ಮ ಮತ್ತು ಇತರರು
**ಪ್ರತಿವಾದಿ 6 (ಎ) :** ಮಹಾದೇವಿ @ ಮಾಧವಿ ಗಂಡ ವೀರಭದ್ರಯ್ಯ ಎ.ಎಮ್. ವಯಸ್ಸು 50 ವರ್ಷ, ಜಿರಾಯಿತಿ. **ಪ್ರತಿವಾದಿ 6 (ಬಿ) :** ಎ.ಎಮ್. ಅರುಣ್ ಕುಮಾರ್ ತಂದೆ ವೀರಭದ್ರಯ್ಯ ಎ.ಎಮ್. ವಯಸ್ಸು 30 ವರ್ಷ, ಇಂಜಿನಿಯರ್. **ಪ್ರತಿವಾದಿ 6 (ಸಿ) :** ಎ.ಎಮ್.ನೇತ್ರಾವತಿ ತಂದೆ ವೀರಭದ್ರಯ್ಯ ಎ.ಎಮ್. ಕೋಂ ಸುಹಾಸ್, ವಯಸ್ಸು 29 ವರ್ಷ, ಮನೆ ಕೆಲಸ. ಇವರುಗಳ ವಾಸ : ಡೋರ್ ನಂ.75, ನೀರಜ್ ಸನ್‌ಶೈನ್, ಜಯಂತಿ ನಗರ, ಮೇನ್ ರಸ್ತೆ, ಹೊರಮಾವು ಬೆಂಗಳೂರು-560043.

**ಪ್ರಕಟಣೆ ಆದೇಶ 5 ನಿಯಮಾವಳಿ 20ರ ಅಡಿಯಲ್ಲಿ ಸಮನ್ಸ್**

ಮೇಲ್ಕಂಡ ಹೆಸರಿನ ವಾದಿ ಶಕುಂತಲಮ್ಮ ಮತ್ತು ಇತರೆಯವರ ಮೇಲೆ ಮತ್ತು ವೀರಭದ್ರಯ್ಯರವರ ಮೇಲೆ ತಾನು ಮಾಲೀಕ ಎಂದು ಘೋಷಣೆ ಮತ್ತು ಶಾಶ್ವತ ನಿರೋಧಾಜ್ಞೆ ಪರಿಹಾರ ಕೋರಿದ್ದು, ವೀರಭದ್ರಯ್ಯನವರು ತೀರಿಕೊಂಡಿದ್ದ ಕಾರಣ ನಿಮ್ಮಗಳನ್ನು ವಾರಸುದಾರರಾಗಿ ಮಾಡಿ, ನೀವುಗಳು ಅರ್ಜಿ ನೋಟೀಸನ್ನು ಪಡೆಯದೇ ಪ್ರಕಟಣೆ ನಂತರ ತಿದ್ದುಪಡಿ ದಾವೆ ಸಮನ್ಸ್ ನಿಮಗೆ ಕಳುಹಿಸಿದಾಗ ಕೋರ್ಟ್ ಮುಖಾಂತರ ಮತ್ತು ನೋಂದಾಯಿತ ಅಂಚೆ ಮುಖಾಂತರ ಪಡೆಯದಿರುವ ಕಾರಣ ಈ ಪ್ರಕಟಣೆ ಮೂಲಕ ತಿಳಿಸುತ್ತಾ ನೀವು ದಿನಾಂಕ 30.01.2025 ರಂದು ಬೆಳಗ್ಗೆ 11 ಗಂಟೆಗೆ ನೀವು ಖುದ್ದಾಗಿ ಆಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ತಕರಾರು ಸಲ್ಲಿಸದಿದ್ದಲ್ಲಿ ನಿಮ್ಮ ಗೈರು ಹಾಜರಾತಿಯಲ್ಲಿ ಈ ದಾವೆಯನ್ನು ಸೂಕ್ತ ಕಂಡ ರೀತಿಯಲ್ಲಿ ವಿಲೇಪಡಿಸಲಾಗುವುದು ತಿಳಿಯಿರಿ.

ಈ ಪ್ರಕಟಣೆ ಸಮನ್ಸನ್ನು ಈ ನ್ಯಾಯಾಲಯದ ದಸ್ಕತ್ತು ಮತ್ತು ಮೊಹರಿನೊಂದಿಗೆ ದಿನಾಂಕ 30.12.2024ರಂದು ನೀಡಲಾಯಿತು.

**ಡಾ॥ ರೇವಣ್ಣ ಬಳ್ಳಾರಿ.**
ಎಂ.ಎ., ಎಲ್.ಎಲ್.ಬಿ., ಸಿ.ಸಿ.ಲಾ, ನ್ಯಾಯವಾದಿ, #421, ವಾಲಿ ಬಿಲ್ಡಿಂಗ್, ಲಾಯರ್ ರಸ್ತೆ, ಕೆ.ಬಿ.ಬಡಾವಣೆ, ದಾವಣಗೆರೆ-577002.
ಮೊ. ನಂ. 9448339322, 9632322652
**ವಾಸ :** 1071, ಕಾಯಕ, ಬಕ್ಕೇಶ್ವರ ಶಾಲೆ ಪಕ್ಕ, 2ನೇ ಮೇನ್ 1ನೇ ಕ್ರಾಸ್, ಎಸ್.ನಿಜಲಿಂಗಪ್ಪ ಬಡಾವಣೆ, ದಾವಣಗೆರೆ - 577004

ನ್ಯಾಯಾಲಯದ ಆದೇಶದ ಮೇರೆಗೆ
**ಮುಖ್ಯ ಲಿಪಿಕ ಅಧಿಕಾರಿ,**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ದಾವಣಗೆರೆ

**ಮಾನ್ಯ ಇಟರ್ನರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಜಗಳೂರು.**

**ಎಂ.ವಿ.ಸಿ.ನಂ. 520/2023**

**ಅರ್ಜಿದಾರರು :** ಶ್ರೀ ಎಸ್.ನಾಗರಾಜ ಬಿನ್ ಶ್ರೀಕಂಠಪ್ಪ, ವಯಸ್ಸು ಸುಮಾರು 38 ವರ್ಷ, ವಾಸ: ದೊಣ್ಣೆಹಳ್ಳಿ ಗ್ರಾಮ, ಜಗಳೂರು ತಾಲ್ಲೂಕು.

**ವಿರುದ್ಧ -/ ಎದುರುದಾರರು ನಂ.3 :** ಶ್ರೀ. ಝೋಬ್ ಅಹಮದ್, ತಂದೆಯ ಹೆಸರು ಅರ್ಜಿದಾರರಿಗೆ ಗೊತ್ತಿಲ್ಲ, ವಯಸ್ಸು ಸುಮಾರು 46 ವರ್ಷ, ಆಟೋರಿಕ್ಷಾ ನಂ. ಕೆಎ-17/ಡಿ-6260 ರ ವಿಮಾದಾರರು, ವಾಸ: 5ನೇ ಕ್ರಾಸ್, ಬಸ್ ಸ್ಟಾಪ್ ಹತ್ತಿರ, ಅಹಮದ್ ನಗರ, ದಾವಣಗೆರೆ.

**ಸಾರ್ವಜನಿಕ ನೋಟೀಸ್**

ಮೇಲ್ಕಂಡ ಪ್ರಕರಣದಲ್ಲಿನ ಅರ್ಜಿದಾರರು ಎದುರುದಾರರ ವಿರುದ್ಧ, ತಾನು ಈ ಹಿಂದೆ ವಾಹನ ಅಪಘಾತದಲ್ಲಿ ಗಾಯಗೊಂಡಿದ್ದು, ಸದರಿ ಗಾಯಗಳಿಗೆ ಪರಿಹಾರವನ್ನು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿದಾರರ, ಅರ್ಜಿಯನ್ನು ಮಾನ್ಯ ಘನ ನ್ಯಾಯಾಲಯವು ನೋಂದಾಯಿಸಿಕೊಂಡು ಪ್ರಕರಣವನ್ನು ದಿನಾಂಕ 09.01.2025ರಂದು ಬೆಳಗ್ಗೆ 11-00 ಗಂಟೆಗೆ ವಿಚಾರಣೆಗಾಗಿ ನಿಗದಿಪಡಿಸಿದ್ದು, ಅರ್ಜಿದಾರರ ಅರ್ಜಿಗೆ ಯಾರದಾದರೂ ತಕರಾರು ಇದ್ದಲ್ಲಿ, 3ನೇ ಎದುರುದಾರ ರಾದ ತಾವಾಗಲೀ ಅಥವಾ ತಮ್ಮ ಪರ ವಕೀಲರ ಮುಖಾಂತರವಾಗಲೀ, ನಿಗದಿತ ದಿನಾಂಕದಂದು, ನಿಗದಿತ ಸಮಯದಂದು ಮೇಲ್ಕಂಡ ನ್ಯಾಯಾಲಯದಲ್ಲಿ ತಮ್ಮ ಅಹವಾಲು ಸಲ್ಲಿಸಬಹುದು. ತಪ್ಪಿದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ ದಿ. 30.12.2024 ರಂದು ನೀಡಲಾಗಿದೆ.

**ಅರ್ಜಿದಾರರ ಪರ ವಕೀಲರು**
**ಸಹಿ/- (ಜಿ.ಎಸ್. ಲಕ್ಷ್ಮಣ)**
**ವಕೀಲರು, ದಿನಾಂಕ: 30.12.2024**

**ನ್ಯಾಯಾಲಯದ ಆದೇಶದ ಮೇರೆಗೆ**
**ಸಹಿ/- ಶಿರಸ್ತೇದಾರರು, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ದಾವಣಗೆರೆ.**

# ಟೈಲರ್ ಕಲ್ಯಾಣ ಮಂಡಳಿ ಜಾರಿಗೆ ಸರ್ಕಾರ ಬೊಕ್ಕಸದ ಹಣ ಕೊಡಬೇಕಾಗಿಲ್ಲ




## ಎಐಟಿಯುಸಿ ರಾಜ್ಯ ಕಾರ್ಯದರ್ಶಿ ಆವರಗೆರೆ ಚಂದ್ರು

ದಾವಣಗೆರೆ, ಡಿ. 30- ರಾಜ್ಯದಲ್ಲಿ ಟೈಲರ್ ಕಲ್ಯಾಣ ಮಂಡಳಿ ಜಾರಿಗೆ ತಂದರೆ ಸರ್ಕಾರ ಬೊಕ್ಕಸದ ಹಣ ಕೊಡಬೇಕಾಗಿಲ್ಲ ಎಂದು ಎಐಟಿಯುಸಿ ರಾಜ್ಯ ಕಾರ್ಯದರ್ಶಿ ಹಾಗೂ ಟೈಲರ್ ಫೆಡರೇಶನ್ ನ ರಾಜ್ಯ ಕಾರ್ಯದರ್ಶಿ ಕಾಂ. ಆವರಗೆರೆ ಚಂದ್ರು ಹೇಳಿದರು.

ಟೈಲರ್ ಕಲ್ಯಾಣ ಮಂಡಳಿಗೆ ಟೆಕ್ಸ್‌ಟೈಲ್ಸ್ ಮಿಲ್ಸ್, ಗಾರ್ಮೆಂಟ್ಸ್, ಬಟ್ಟೆ ಅಂಗಡಿಗಳು ಹಾಗೂ ಬಟ್ಟೆ ಹೊಲಿಗೆಗೆ ಪೂರಕವಾಗಿ ಉತ್ಪನ್ನ ಮಾಡುವ ಸರಕುದಾರ ಉತ್ಪಾದಕರಿಂದ 2% ಸೆಸ್ ಸಂಗ್ರಹ ಮಾಡುವ ಮೂಲಕ ಬರುವ ಬಜೆಟ್ ನಲ್ಲಿ ಟೈಲರ್ ಕಲ್ಯಾಣ ಮಂಡಳಿ ಜಾರಿಗೆ ತಂದು ರಾಜ್ಯಾದ್ಯಂತ ಇರುವ ಸುಮಾರು 15 ಲಕ್ಷ ಟೈಲರ್‌ಗಳ ಕುಟುಂಬಗಳಿಗೆ ನೆರವಾಗಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದರು.

ಜಯದೇವ ಮುರುಘರಾಜೇಂದ್ರ ವೃತ್ತದಿಂದ ಪ್ರತಿಭಟನಾ ಮೆರವಣಿಗೆ ಮೂಲಕ ಟೈಲರ್‌ಗಳು ಟೈಲರ್ ಕಲ್ಯಾಣ ಮಂಡಳಿ ಜಾರಿಗೆ ತರಬೇಕೆಂದು ಘೋಷಣೆ ಕೂಗುತ್ತಾ ಅಶೋಕ ರಸ್ತೆ, ಗಾಂಧಿ ಸರ್ಕಲ್, ಹಳೆ ನಿಲ್ದಾಣ ರಸ್ತೆ ಮೂಲಕ ಸಾಗಿ ಎಸಿ ಕಚೇರಿಗೆ ತೆರಳಿ, ಮುಖ್ಯಮಂತ್ರಿಗಳು, ಕಾರ್ಮಿಕ ಮಂತ್ರಿಗಳು ಮತ್ತು ಜವಳಿ ಖಾತೆ ಸಚಿವರಿಗೆ ಎಸಿ ಕಚೇರಿ ಮೂಲಕ ಮನವಿ ಸಲ್ಲಿಸಿದರು.

ರಾಜ್ಯ ಉಪಾಧ್ಯಕ್ಷರಾದ ರಮೇಶ್ ಸಿ. ದಾಸರ, ಸಂಚಾಲಕರಾದ ಗದಿಗೇಶ ಪಾಳೇದ, ಸರೋಜ ಕೆ.ಎಂ. ಚನ್ನಪ್ಪ ಗುಮ್ಮನೂರು, ಐರಣಿ ಚಂದ್ರು, ಮಹಮದ್ ರಫೀಕ್, ಟೈಲರ್ ಮುಖಂಡರುಗಳಾದ ನಾಗರತ್ನಮ್ಮ, ಸ್ಮಿತಾ, ಉಷಾ, ಬಸಮ್ಮ, ದಯಾನಂದ, ರಾಮು, ಅಶೋಕ, ಮರಿಯಪ್ಪ, ನಾಗರತ್ನಮ್ಮ, ಕಾವೇರಿ, ವೀಣಾ, ಪುಷ್ಪಾ ಮತ್ತಿತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



## ಜೆ.ಹೆಚ್. ಪಟೇಲ್ ಸಮಾಧಿಗೆ ಗೌರವ ಸಲ್ಲಿಸಿದ ಲೋಕಾಯುಕ್ತ

ಕಾರಿಗನೂರು, ಡಿ. 30 - ಲೋಕಾಯುಕ್ತ ಬಿ.ಎಸ್. ಪಾಟೀಲ್ ಇಂದು ಮಾಜಿ ಮುಖ್ಯಮಂತ್ರಿ ದಿ. ಜೆ.ಎಚ್. ಪಟೇಲ್ ಸಮಾಧಿಗೆ ಭೇಟಿ ನೀಡಿ ಗೌರವ ಸಲ್ಲಿಸಿದರು. ಈ ಸಂದರ್ಭದಲ್ಲಿ ಚನ್ನಗಿರಿ ಮಾಜಿ ಶಾಸಕ ಮಹಿಮಾ ಪಟೇಲ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ತೇಜಸ್ವಿ ವಿ. ಪಟೇಲ್ ಮತ್ತು ಭಾಗವಹಿಸಿದ್ದರು. ಬಿ.ಎಸ್. ಪಾಟೀಲ್ ರವರಿಗೆ ಪುಸ್ತಕ ನೀಡಿ ಗೌರವ ಸಲ್ಲಿಸಲಾಯಿತು.

# ಆತ್ಮಬಲದಿಂದ ಜೀವನ ನಡೆಸಿದರೆ ಯಶಸ್ಸು

## ಹಾಲುವರ್ತಿ ಮಠದಲ್ಲಿ ಅರಿವಿನ ಬೆಳಗು ದತ್ತಿ ಕಾರ್ಯಕ್ರಮದಲ್ಲಿ ನೀಲಗುಂದ ಶ್ರೀಗಳು



**ಹರಪನಹಳ್ಳಿ**

ಹರಪನಹಳ್ಳಿ, ಡಿ. 30- ದೇವರ ಫೋಟೋ ಬದಲು ಬುದ್ಧ, ಬಸವ ಮತ್ತು ಅಂಬೇಡ್ಕರ್‌ರಂತಹ ಮಹಾನ್ ಪುರುಷರ ಫೋಟೋಗಳನ್ನು ಮನೆಯಲ್ಲಿ ಹಾಕಿಕೊಳ್ಳಿ ಎಂದು ನೀಲಗುಂದ ಗುಡ್ಡದ ವಿರಕ್ತ ಮಠದ ಚನ್ನಬಸವ ಶಿವಯೋಗಿ ಸ್ವಾಮೀಜಿ ಸಲಹೆ ನೀಡಿದರು.

ಪಟ್ಟಣದ ಹೊರ ಹೊಲಯದಲ್ಲಿರುವ ಹಾಲವರ್ತಿ ಮಠದಲ್ಲಿ ಕದಳಿ ವೇದಿಕೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಮೈಸೂರು ಚಂದ್ರಮ್ಮ ಮತ್ತು ಬಸವಲಿಂಗಪ್ಪನವರ 'ತಿಂಗಳ ಅರಿವಿನ ಬೆಳಗು' ಶರಣ ಸಾಹಿತ್ಯ ಪರಿಷತ್ತಿನ ದತ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ ದರು.

ಹೀಗೆ ಬುದ್ದ, ಬಸವ, ಅಂಬೇಡ್ಕರ್‌ರವರ ತತ್ವ ಆದರ್ಶಗಳನ್ನು ಮತ್ತು ಅವರು ನೀಡಿರುವ ಸಂಸ್ಕಾರ, ಶಿಕ್ಷಣದ ಅರಿವನ್ನು ಮಕ್ಕಳಿಗೆ ನೀಡಿದರೆ, ಮನೆಯು ಆರ್ಥಿಕ ವಾಗಿ, ಸಾಮಾಜಿಕವಾಗಿ ಉತ್ತಮ ಗುಣಮಟ್ಟ ದಲ್ಲಿ ಸಾಗಲು ಅನುಕೂಲವಾಗುತ್ತದೆ ಎಂದರು.

ದೇವರುಗಳನ್ನು ನಂಬಿದರೆ ಫಲ ದೊರೆಯುವುದಿಲ್ಲ, ಹಣ, ಚಿನ್ನ ನೀಡುವುದರಿಂದ ಪುರೋಹಿತರು ಸಿರಿವಂತ ರಾಗುತ್ತಾರೆ, ಅದು ದೇವರಿಗೆ ಸಮರ್ಪಣೆಯಾಗುವುದಿಲ್ಲ, ಅದರ ಹೊರತು ಶಿಕ್ಷಣವನ್ನು ನೀಡಿ, ಕೈಯಲ್ಲಿರುವ ರೇಖೆಯನ್ನು ನಂಬಿ ಜೀವಿಸಬೇಡಿ, ನಿಮ್ಮಲ್ಲಿರುವ ಆತ್ಮಬಲದಿಂದ ಜೀವನ ವನ್ನು ಸಾಗಿಸಿದರೆ ಯಶಸ್ಸು ದೊರೆಯುತ್ತದೆ ಎಂದರು.

ಲಿಂಗನಾಯಕನಹಳ್ಳಿ ಜಂಗಮ ಕ್ಷೇತ್ರದ ಶ್ರೀ ಚನ್ನವೀರ ಮಹಾಶಿವಯೋಗಿಗಳು ಸಾನ್ನಿಧ್ಯ ವಹಿಸಿ ಮಾತನಾಡಿ, ಯಾವುದೇ ಕಾರಣಗಳು ಇಲ್ಲದೆ ಯಾವ ಕಾರ್ಯಗಳೂ ಜರುಗುವುದಿಲ್ಲ. ಎಲ್ಲಾ ದೇವರ ಪೂರ್ವಾರ್ಜಿತ ಅನುಗ್ರಹದಿಂದಲೇ ನಡೆಯುತ್ತವೆ. ಜೀವನದಲ್ಲಿ ಕಾಮ, ಕ್ರೋಧ, ಲೋಭ, ಮದ-ಮತ್ಸರಗಳನ್ನು ತ್ಯಜಿಸಿ ಜೀವಿಸಬೇಕು. ಆಗ ಜೀವನವು ನಿರ್ಲಿಪ್ತ ಜೀವನವಾಗುತ್ತದೆ, ಸತ್ಸಂಗದ ಮೊರೆ ಹೋದರೆ ಜೀವನದಲ್ಲಿ ಮೋಕ್ಷ ದೊರೆಯುತ್ತದೆ ಎಂದರು.

ಸತ್ಯದ ಮಾರ್ಗದಲ್ಲಿ ನಡೆಯಲು ಉತ್ತಮ ಗುರುವಿನ ಮೊರೆ ಹೋಗುವ ಅಗತ್ಯವಿದೆ, ಜೀವನದ ಬಂಧನಕ್ಕೆ ಒಳಗಾಗದೇ ಬೆಳಕನ್ನು ಪಡೆಯುವ ಮಾರ್ಗದೆಡೆಗೆ ಸಾಗಿರಿ ಎಂದು ಅವರು ಕರೆ ನೀಡಿದರು.

ಎಂ. ಪಿ. ಪ್ರಕಾಶ್ ಸಮಾಜಮುಖಿ ಟ್ರಸ್ಟ್ ಅಧ್ಯಕ್ಷೆ ಎಂ.ಪಿ. ವೀಣಾ ಮಹಾಂತೇಶ್ ಮಾತನಾಡಿ, ಮಹಿಳೆಯರಿಗೆ ಇಂದು ಎಲ್ಲಾ ರಂಗಗಳಲ್ಲೂ ಪ್ರಾಧಾನ್ಯತೆ ಸಿಗಲು ಬಸವಣ್ಣನವರ ಆದರ್ಶಗಳು ಪ್ರಮುಖ ಪಾತ್ರ ವಹಿಸುತ್ತವೆ, ಬಸವಣ್ಣನವರು ಒಬ್ಬ ಶ್ರೇಷ್ಠ ಆರ್ಥಿಕ ತಜ್ಞರಾಗಿದ್ದರು ಎಂದರು.

ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಷಣ್ಮುಖ ಪೂಜಾರ್ ಹಾಗೂ ಜೆ. ಬಿ. ನೂರ್ ಜಹಾನ್ ಬೇಗಂ ಅವರು ವಿಶೇಷ ಉಪನ್ಯಾಸ ನೀಡಿದರು.

ಕದಳಿ ವೇದಿಕೆ ಜಿಲ್ಲಾಧ್ಯಕ್ಷೆ ಇಂದುಮತಿ, ದತ್ತಿ ದಾನಿಗಳಾದ ಮೈಸೂರು ಭರ್ಮಪ್ಪ, ಕೆ.ಎಂ. ಗುರುಸಿದ್ದಯ್ಯ, ಚಂದ್ರಶೇಖರ ಪೂಜಾರ್, ಸಾಹಿತಿಗಳಾದ ಬಣಕಾರ ರಾಜಶೇಖರ್ ಬಾಗಳಿ, ಹೇಮಣ್ಣ ಮೋರಿಗೆರೆ, ವಿ. ಜಿ. ಜಯಶ್ರೀ, ಕದಳಿ ವೇದಿಕೆ ತಾಲ್ಲೂಕು ಅಧ್ಯಕ್ಷ ಎ. ಕೆ. ಸಂತೋಷ, ಎ. ಕರಿಬಸಪ್ಪ, ಎ. ಕೊಟ್ರಪ್ಪ, ಟಿ.ಎಚ್. ಎಂ ಕೊಟ್ರಯ್ಯ, ಕೆ. ಎಂ. ಕೊಟ್ರಯ್ಯ, ಐ. ಬಸವರಾಜಪ್ಪ, ಶಂಕ್ರಪ್ಪ ಮಾಸ್ಟರ್ ಹಾಗೂ ಇತರರು ಇದ್ದರು.

## ಹೊನ್ನಾಳಿಯಲ್ಲಿ ಬ್ರೆಡ್, ಹಣ್ಣು ವಿತರಣೆ

ಹೊನ್ನಾಳಿ, ಡಿ. 30 - ವಾಜಪೇಯಿರವರ 100ನೇ ಹುಟ್ಟ ಹಬ್ಬದ ಅಂಗವಾಗಿ ಹೊನ್ನಾಳಿ ಸರ್ಕಾರಿ ಆಸ್ಪತ್ರೆಗಳ ಒಳ ಹಾಗೂ ಹೊರ ರೋಗಿಗಳಿಗೆ ಎಂ.ಆರ್ . ಮಹೇಶ್ ನೇತ್ರೃತ್ವದಲ್ಲಿ ಬ್ರೆಡ್, ಹಣ್ಣು, ವಿತರಿಸಲಾಯಿತು. ಬಿಜೆಪಿ ಮುಖಂಡರಾದ ಶಾಂತರಾಜ, ಪಾಟೀಲ್, ಕೆ.ವಿ. ಚನ್ನಪ್ಪ, ನೆಲಹೊನ್ನೆ ದೇವರಾಜ, ಯಕ್ಕನಹಳ್ಳಿ ಜಗದೀಶ, ಬಿಂಬಾ ಮಂಜು ಸೇರಿದಂತೆ ಇನ್ನಿತರರಿದ್ದರು.



# ಬೆಂಗಳೂರು ವಿಭಾಗ ಮಟ್ಟದ ಬ್ಯಾಡ್ಮಿಂಟನ್ ಪಂದ್ಯ : 300 ಕ್ರೀಡಾಪಟುಗಳು ಭಾಗಿ

ದಾವಣಗೆರೆ, ಡಿ. 30- ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಉಪ ನಿರ್ದೇಶಕರ ಕಚೇರಿ (ಆಡಳಿತ) ಹಾಗೂ ಕರ್ನಾಟಕ ರಾಜ್ಯ ದೈಹಿಕ ಶಿಕ್ಷಕರ ಸಂಘ ಇವರ ಸಂಯುಕ್ತಾಶ್ರಯದಲ್ಲಿ 2024-25 ನೇ ಸಾಲಿನ 14 ಮತ್ತು 17 ವರ್ಷ ವಯೋಮಿತಿಯೊಳಗಿನ ಬೆಂಗಳೂರು ವಿಭಾಗ ಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಸೋಮವಾರ ಆರಂಭಗೊಂಡಿತು.

ಮೊದಲ ದಿನವಾದ ಇಂದು 14 ವರ್ಷ ವಯೋಮಿತಿಯೊಳಗಿನ ಬಾಲಕರ ಬ್ಯಾಡ್ಮಿಂಟನ್ ಪಂದ್ಯದಲ್ಲಿ ಬೆಂಗಳೂರು ವಿಭಾಗ ವ್ಯಾಪ್ತಿಯ 11 ಜಿಲ್ಲೆಗಳಿಂದ ಬಾಲಕ ಹಾಗೂ ಬಾಲಕಿಯರ 11 ತಂಡಗಳ ಆಟಗಾರರು ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿದರು.

ನಾಳೆ ದಿನಾಂಕ 31ರ ಮಂಗಳವಾರ 17 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ಬ್ಯಾಡ್ಮಿಂಟನ್ ಕ್ರೀಡೆ ನಡೆಯಲಿದ್ದು, ತಲಾ 11 ತಂಡಗಳು ಭಾಗವಹಿಸಲಿವೆ.

ಈ ಎರಡು ದಿನಗಳ ಕ್ರೀಡಾಕೂಟದಲ್ಲಿ ಒಟ್ಟು 300 ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ಎರಡೂ ವಿಭಾಗದಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ಕ್ರೀಡಾಪಟುಗಳು ರಾಜ್ಯಮಟ್ಟಕ್ಕೆ ಆಯ್ಕೆಯಾಗಲಿದ್ದಾರೆ ಎಂದು ಜಿಲ್ಲಾ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಶ್ರೀನಿವಾಸ್ ತಿಳಿಸಿದರು.

ಇದೇ ಸಂದರ್ಭದಲ್ಲಿ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆ ನಿರ್ದೇಶಕ ದ್ವಾರಕೀಶ್ ನಾಯ್ಕ, ಕಾಂತಪ್ಪ, ಗದಿಗೆಪ್ಪ, ಗಣೇಶ್, ಜಿಲ್ಲಾ ದೈಹಿಕ ಶಿಕ್ಷಕರ ಸಂಘದ ಕಾರ್ಯದರ್ಶಿ ಸಂತೋಷ್ ಮತ್ತಿತರರು ಭಾಗವಹಿಸಲಿದ್ದಾರೆ.



## ನಗರದಲ್ಲಿ ಇಂದಿನಿಂದ ಕಲಬುರಗಿಯ ಶರಣ ಬಸವೇಶ್ವರರ ಪುರಾಣ ಪ್ರವಚನ

ಚೌಕಿಪೇಟೆಯಲ್ಲಿರುವ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ದೇವಸ್ಥಾನದ ಆವರಣದಲ್ಲಿ ಇಂದಿನಿಂದ ಜನವರಿ 31 ರವರೆಗೆ ಪಂಡಿತ್ ಪುಟ್ಟರಾಜ ಕವಿ ಗವಾಯಿ ವಿರಚಿತ ಕಲಬುರಗಿಯ ಮಹಾದಾಸೋಹಿ ಶರಣ ಬಸವೇಶ್ವರರ ಪುರಾಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪುರಾಣ ಪ್ರವಚನ ಸಮಿತಿಯ ಅಜ್ಜಂಪುರ ಶೆಟ್ರು ಮೃತ್ಯುಂಜಯ ಅವರು ತಿಳಿಸಿದರು.

ಗದಗಿನ ವೀರೇಶ್ವರ ಪುಣ್ಯಾಶ್ರಮದ ಮಂಜುನಾಥ ಶಾಸ್ತ್ರಿ ಇಂದಿನಿಂದ ಪ್ರತಿ ದಿನ ಸಂಜೆ 6.30 ರಿಂದ 9 ಗಂಟೆಯವರೆಗೆ ಪುರಾಣ ಪ್ರವಚನ ನಡೆಸಿಕೊಡಲಿದ್ದು, ಹುಚ್ಚಯ್ಯಸ್ವಾಮಿ ಹಾಗೂ ವೀರೇಶ್ ಹಿರೇಮಠ ಅವರು ಸಹಕಾರ ನೀಡಲಿದ್ದಾರೆಂದರು. ಇಂದು ಸಂಜೆ 6.30ಕ್ಕೆ ಹೆಬ್ಬಾಳು ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಉದ್ಘಾಟನಾ ಸಮಾರಂಭ ಜರುಗಲಿದೆ. ಗದಗಿನ ವೀರೇಶ್ವರ ಪುಣ್ಯಾಶ್ರಮದ ಕಲ್ಲಯ್ಯಜ್ಜನವರು ನೇತೃತ್ವ ವಹಿಸುವರು.



ದಾವಣಗೆರೆ ವೀರೇಶ್ವರ ಪುಣ್ಯಾಶ್ರಮದ ಅಧ್ಯಕ್ಷ ಅಥಣಿ ಎಸ್. ವೀರಣ್ಣ, ಮಾಗಾನಹಳ್ಳಿ ಜಯದೇವಪ್ಪ, ರುದ್ರೇಶ್ ಉಜ್ಜಿನಿಕೊಪ್ಪ, ಸರೋಜಮ್ಮ, ನಿಜಲಿಂಗಪ್ಪ ಕಡೇಕೊಪ್ಪ, ಶಿವಕುಮಾರ್, ರುದ್ರಣ್ಣ, ಡಿ. ನಾಗರಾಜಪ್ಪ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ.

# ನಗರದಲ್ಲಿ ತಮಟೆ - ಕಂಸಾಳೆ ತರಬೇತಿ ಶಿಬಿರ



ದಾವಣಗೆರೆ, ಡಿ. 30 - ರಂಗ ಅನಿಕೇತನ, ದಾವಣಗೆರೆ ಮಾನವ ಬಂಧುತ್ವ ವೇದಿಕೆ, ಎ.ವಿ.ಕೆ. ಕಾಲೇಜು ಆಶ್ರಯದಲ್ಲಿ ಮಹಿಳೆಯರಿಗಾಗಿ ತಮಟೆ ಮತ್ತು ಕಂಸಾಳೆ ತರಬೇತಿ ಶಿಬಿರವನ್ನು ಎ.ವಿ.ಕೆ. ಕಾಲೇಜಿನ ಆವರಣದಲ್ಲಿರುವ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ಅವರು ತಮಟೆ ಭಾರಿಸುವ ಮೂಲಕ ನೆರವೇರಿಸಿ ಮಾತನಾಡಿದರು.

ಕರ್ನಾಟಕವು ಕಲೆ ಮತ್ತು ಸಂಸ್ಕೃತಿಯಲ್ಲಿ ಶ್ರೀಮಂತ ರಾಜ್ಯವಾಗಿದ್ದು, ಇಲ್ಲಿ ಸಾವಿರಾರು ಜನಪದ ಕಲೆಗಳು ಒಬ್ಬರಿಂದ ಒಬ್ಬರಿಗೆ ಮೌಖಿಕವಾಗಿ ಸಾಗುತ್ತಾ ಬಂದಿವೆ. ಇಂದಿನ ಆಧುನಿಕ ಯುಗದಲ್ಲಿ ಎಲೆಕ್ಟ್ರಾನಿಕ್ ಮತ್ತು ಡಿಜಿಟಲ್ ಮಾಧ್ಯಮಗಳ ಪ್ರಭಾವದಿಂದ ಜನಪದ ಕಲೆಯ ಭವ್ಯ ಪರಂಪರೆ ಕಡಿಮೆಯಾಗುತ್ತಿದೆ. ಇಂದು ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ನಗರಗಳಲ್ಲಿ ಜಾನಪದ ಕಲೆಗಳನ್ನು ಉಳಿಸಿ, ಬೆಳೆಸುವ ಜವಾಬ್ದಾರಿ ಇಂದಿನ ಯುವಜನತೆಯ ಮೇಲಿದ್ದು, ಈ ನಿಟ್ಟಿನಲ್ಲಿ ಪ್ರೌಢಶಾಲಾ ಮಟ್ಟದಿಂದಲೇ ವಿದ್ಯಾರ್ಥಿಗಳಿಗೆ ಜನಪದ ಕಲೆಗಳ ತರಬೇತಿ ನೀಡುವುದು ಮುಖ್ಯವಾಗಿದೆ ಎಂದರು.

ಇಂದಿನ ಮಕ್ಕಳು ಸಾಮಾಜಿಕ ಜಾಲತಾಣಗಳು ಮತ್ತು ಮೊಬೈಲ್‌ಗಳ ಪ್ರಭಾವಕ್ಕೆ ಒಳಗಾಗಿದ್ದು, ಅವುಗಳಿಂದ ಹೊರತರಲು ಜಾನಪದ ಕಲೆಗಳ ತರಬೇತಿ ನೀಡುವುದು ಅವಶ್ಯವಾಗಿದೆ. ಇಂದಿನ ಸಂದರ್ಭದಲ್ಲಿ ತಮಟೆ ಮತ್ತು ಕಂಸಾಳೆ ಶಿಬಿರ ಏರ್ಪಡಿಸಿರುವುದು ಅತ್ಯಂತ ಶ್ಲಾಘನೀಯ ಕಾರ್ಯವಾಗಿದ್ದು, ಇಂತಹ ತರಬೇತಿಗಳನ್ನು ಸರ್ಕಾರ ಮತ್ತು ಸಂಘ-ಸಂಸ್ಥೆಗಳು ಏರ್ಪಡಿಸುವ ಮೂಲಕ ಜಾನಪದ ಕಲೆಗಳ ಭವ್ಯ ಪರಂಪರೆಯನ್ನು ಉಳಿಸಬೇಕಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆರ್.ಆರ್. ಶಿವಕುಮಾರ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಹಿರಿಯ ವಕೀಲ ಬಿ.ಎಂ. ಹನುಮಂತಪ್ಪ, ಹೆಚ್. ಎಸ್. ಯೋಗೀಶ್ ಆಗಮಿಸಿದ್ದರು.

ಕಾರ್ಯಕ್ರಮದಲ್ಲಿ ರಂಗ ಅನಿಕೇತನದ ಅಧ್ಯಕ್ಷೆ ಹೆಚ್.ಎನ್. ಸುಧಾ, ವಕೀಲರಾದ ಉಷಾ ಕೈಲಾಸದ್, ನಾಗಮಣಿ ಹಂಪಾಳಿ, ಸಂಪನ್ಮೂಲ ವ್ಯಕ್ತಿಗಳಾಗಿ ಮನೋಜ್ ಆರ್. ಕಂಬಾಳಿ ಹಾಗೂ ಪ್ರಮೋದ್ ಕುಮಾರ್ ಭಾಗವಹಿಸಿದ್ದರು.

ಸ್ವಾಗತವನ್ನು ಸಹಾಯಕ ಪ್ರಾಧ್ಯಾಪಕರಾದ ಆರ್.ಜಿ. ಸವಿತಾ, ವಂದನಾರ್ಪಣೆಯನ್ನು ಡಾ. ಹೆಚ್.ಎನ್. ಲೋಹಿತ್, ನಿರೂಪಣೆಯನ್ನು ಕು. ಎಂ.ಪಿ. ರೇಖಾ ಹಾಗೂ ಪಲ್ಲವಿ ನೆರವೇರಿಸಿದರು.

# 40 ವರ್ಷಗಳ ನಂತರ ಯೂನಿಯನ್ ಕಾರ್ಬೈಡ್ ವಿಷಕಾರಿ ತ್ಯಾಜ್ಯ ವಿಲೇವಾರಿಗೆ ರವಾನೆ

ಭೂಪಾಲ್, ಡಿ. 30- ಇಲ್ಲಿನ ಯೂನಿಯನ್ ಕಾರ್ಬೈಡ್ ಕಾರ್ಖಾಯನೆಯಲ್ಲಿರುವ 377 ಮೆಟ್ರಿಕ್ ಟನ್ ಅಪಾಯಕಾರಿ ತ್ಯಾಜ್ಯವನ್ನು ವಿಲೇವಾರಿಗಾಗಿ ರವಾನಿಸಲಾಗುತ್ತಿದೆ. ಇಂದೋರ್ ಬಳಿಯ ವಿಲೇವಾರಿ ಘಟಕಕ್ಕೆ ತ್ಯಾಜ್ಯವನ್ನು ಕಳಿಸಲಾಗುವುದು.

ಮಧ್ಯಪ್ರದೇಶದ ರಾಜಧಾನಿ ಭೂಪಾಲದಲ್ಲಿರುವ ತ್ಯಾಜ್ಯವನ್ನು ವಿಲೇವಾರಿ ಮಾಡಲು ಹಲವು ಬಾರಿ ನಿರ್ದೇಶನ ನೀಡಿದರೂ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ ಎಂದು ಮಧ್ಯಪ್ರದೇಶದ ಹೈಕೋರ್ಟ್ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ನಂತರ ಈ ಬೆಳವಣಿಗೆಯಾಗಿದೆ.

1984ರ ಡಿಸೆಂಬರ್ 2ರ ರಾತ್ರಿ ಯೂನಿಯನ್ ಕಾರ್ಬೈಡ್ ಘಟಕದಿಂದ ಮಿಥೈಲ್ ಐಸೋಸೈನೈಟ್ ಅನಿಲ ಸೋರಿಕೆಯಾಗಿ 5,479 ಜನ ಸಾವನ್ನಪ್ಪಿದ್ದರು. ಅಲ್ಲದೇ 5 ಲಕ್ಷ ಜನರು ಆರೋಗ್ಯ ಸಮಸ್ಯೆ ಹಾಗೂ ದೀರ್ಘಾವಧಿ ಅಂಗವೈಕಲ್ಯದಿಂದ ಬಳಲಿದ್ದರು.

ಘಟನೆ ಸಂಭವಿಸಿದ ಸುಮಾರು 40 ವರ್ಷಗಳ ನಂತರ ವಿಷಕಾರಿ ತ್ಯಾಜ್ಯ ವಿಲೇವಾರಿ ಪ್ರಕ್ರಿಯೆ ನಡೆದಿದೆ. ಜಿಪಿಎಸ್ ಅಳವಡಿಸಿಕೊಂಡ ಟ್ರಕ್‌ಗಳ ಮೂಲಕ ತ್ಯಾಜ್ಯವನ್ನು ವಿಲೇವಾರಿಗೆ ರವಾನಿಸಲಾಗುತ್ತಿದೆ. ಪಿಪಿಇ ಕಿಟ್ ಹಾಕಿಕೊಂಡಿದ್ದ ಕಾರ್ಮಿಕರು ಹಾಗೂ ಭೂಪಾಲ ಪಾಲಿಕೆಯ ಅಧಿಕಾರಿಗಳು, ಪರಿಸರ ಪರಿಣಿತರು, ವೈದ್ಯರು ತ್ಯಾಜ್ಯದ ಸ್ಥಳದಲ್ಲಿದ್ದಾರೆ. ಈಗ ಸ್ಥಗಿತಗೊಂಡಿರುವ ಕಾರ್ಖಾನೆಗೆ ಪೊಲೀಸರ ಭದ್ರತೆ ಸಹ ಒದಗಿಸಲಾಗಿದೆ.

ಭೂಪಾಲದಿಂದ 250 ಕಿ.ಮೀ. ದೂರದಲ್ಲಿರುವ ಇಂದೋರ್ ಸಮೀಪದ ಪೀತಂಪುರದಲ್ಲಿ ತ್ಯಾಜ್ಯ ವಿಲೇವಾರಿ ಮಾಡಲು ನಿರ್ಧರಿಸಲಾಗಿದೆ.




ಅನಿಲ ದುರಂತ ನಡೆದು 40 ವರ್ಷಗಳಾಗಿದ್ದರೂ ವಿಷಕಾರಿ ತ್ಯಾಜ್ಯವನ್ನು ವಿಲೇವಾರಿ ಮಾಡಿಲ್ಲ. ಇದು ರಾಜ್ಯ ಸರ್ಕಾರದ ನಿಷ್ಕ್ರಿಯತೆ ತೋರಿಸುತ್ತದೆ. ಈ ನಿರ್ಲಕ್ಷ್ಯ ಇನ್ನೊಂದು ದುರಂತಕ್ಕೆ ಕಾರಣವಾಗಬಹುದು ಎಂದು ಹೇಳಿದ್ದ ಮಧ್ಯಪ್ರದೇಶ ಹೈಕೋರ್ಟ್, 4 ವಾರಗಳಲ್ಲಿ ತ್ಯಾಜ್ಯ ವಿಲೇವಾರಿ ಮಾಡುವಂತೆ ತಾಕೀತು ಮಾಡಿತ್ತು.

ಆದಷ್ಟು ವೇಗವಾಗಿ ವಿಷಕಾರಿ ತ್ಯಾಜ್ಯವನ್ನು ರವಾನಿಸಲು 250 ಕಿ.ಮೀ.ಗಳ ಹಸಿರು ಕಾರಿಡಾರ್ ರೂಪಿಸಲಾಗಿದೆ. ಹೈಕೋರ್ಟ್ ನೀಡಿರುವ ಗಡುವಿನಂತೆ ಜನವರಿ 3ರ ಒಳಗೆ ತ್ಯಾಜ್ಯ ರವಾನೆಯಾಗಲಿದೆ ಎಂದು ಮೂಲಗಳು ಹೇಳಿವೆ.

ಪೀತಂಪುರ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಸ್ವಲ್ಪ ತ್ಯಾಜ್ಯವನ್ನು ಸುಡಲಾಗುವುದು. ಇದರ ಬೂದಿಯನ್ನು ವೈಜ್ಞಾನಿಕವಾಗಿ ಪರಿಶೀಲಿಸಿ, ಇದರಲ್ಲಿ ಯಾವುದಾದರೂ ಹಾನಿಕಾರಕ ಅಂಶಗಳು ಉಳಿದಿವೆಯೇ ಎಂಬ ಬಗ್ಗೆ ಪರಿಶೀಲಿಸಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.

ಎಲ್ಲವೂ ಸರಿಯಾಗಿ ನಡೆದರೆ 3 ತಿಂಗಳ ಒಳಗಾಗಿ ತ್ಯಾಜ್ಯವನ್ನು ಸಂಪೂರ್ಣ ಸುಡಲಾಗುವುದು. ಇಲ್ಲವಾದಲ್ಲಿ ತ್ಯಾಜ್ಯ ಸುಡುವುದು ವಿಳಂಬವಾಗಲಿದೆ ಹಾಗೂ 9 ತಿಂಗಳವರೆಗೆ ಸಮಯ ಬೇಕಾಗಲಿದೆ ಎಂದು ರಾಜ್ಯ ಅನಿಲ ಪರಿಹಾರ ಹಾಗೂ ಪುನರ್ವಸತಿ ಇಲಾಖೆಯ ನಿರ್ದೇಶಕ ಸ್ವತಂತ್ರ ಕುಮಾರ್ ಸಿಂಗ್ ತಿಳಿಸಿದ್ದಾರೆ.

ತ್ಯಾಜ್ಯ ಸುಡುವುದರಿಂದ ಬರುವ ಹೊಗೆಯನ್ನು 4 ಹಂತಗಳಲ್ಲಿ ಶುದ್ಧೀಕರಿಸಲಾಗುವುದು. ಇದರಿಂದ ಪರಿಸರಕ್ಕೆ ಯಾವುದೇ ಹಾನಿಯಾಗದಂತೆ ನೋಡಿಕೊಳ್ಳಲಾಗುವುದು. ಸುಟ್ಟ ನಂತರ ಉಳಿಯುವ ತ್ಯಾಜ್ಯವನ್ನು ಭೂಮಿಯಲ್ಲಿ ಸುರಕ್ಷಿತವಾಗಿ ಹೂಳಲಾಗುವುದು. ಇದು ಮಣ್ಣು ಹಾಗೂ ನೀರಿನ ಸಂಪರ್ಕಕ್ಕೆ ಬರದಂತೆ ಎಚ್ಚರಿಕೆ ವಹಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.





# ಎಳ್ಳು ಅಮಾವಾಸ್ಯೆ : ಉಕ್ಕಡಗಾತ್ರಿಯಲ್ಲಿ ಭಕ್ತ ಸಾಗರ

ಮಲೇಬೆನ್ನೂರು, ಡಿ. 30- ಎಳ್ಳು ಅಮಾವಾಸ್ಯೆ ಪ್ರಯುಕ್ತ ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ದರ್ಶನ ಪಡೆಯಲು ಸೋಮವಾರ ಸಾವಿರಾರು ಭಕ್ತರು ಆಗಮಿಸಿದ್ದರು. ಭಕ್ತರು ತುಂಗಭದ್ರಾ ನದಿಯ ಸ್ನಾನ ಘಟ್ಟದಲ್ಲಿ ಪುಣ್ಯ ಸ್ನಾನ ಮಾಡಿದ ನಂತರ ವಿಶಿಷ್ಟ ಪೂಜೆ, ಪುನಸ್ಕಾರಗಳನ್ನು ಮಾಡಿದರು.

ನಿಂಬೆ ಹಣ್ಣುಗಳ ರಾಶಿ ಮೇಲೆ ಗಂಡು, ಹೆಣ್ಣು ಎನ್ನದೆ ದಿಂಡುರುಳು ಸೇವೆ ಸಲ್ಲಿಸಿದರು.

ಭೂತ ಪ್ರೇತ ಆವಾಹನೆ ಆದವರು ಅಜ್ಜಯ್ಯನ ಸನ್ನಿಧಿಯ ಅನತಿ ದೂರದಲ್ಲಿ ಅಜ್ಜಯ್ಯ ಬಿಡು ನನ್ನ ಕಾಡಬೇಡ ಎಂದು ಚೀರುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಭೂತ, ಪ್ರೇತ ನಿವಾರಣೆ, ವ್ಯಾಜ್ಯ, ಕಂಕಣಭಾಗ್ಯ, ಸಂತಾನ ಭಾಗ್ಯ, ಉದ್ಯೋಗ, ರೋಗ - ರುಜಿನಗಳ ಪರಿಹಾರಕ ಅಜ್ಜಯ್ಯ ಎಂಬ ನಂಬಿಕೆಯಿಂದ ಪರಿಹಾರ ಕಂಡವರು ಬಂದು ಹರಕೆ ತೀರಿಸಿದರು.

ಕೆಲವರು ಮುಡಿ ತೆಗೆಸಿದರು. ಹೊರ ರಾಜ್ಯಗಳಿಂದಲೂ ಭಕ್ತರು ಉಕ್ಕಡಗಾತ್ರಿಗೆ ಬಂದು ಅಜ್ಜಯ್ಯನ ದರ್ಶನ ಪಡೆದರು.

ಭಕ್ತರಿಗೆ ತಂಗಲು ವಸತಿ ಗೃಹಗಳಲ್ಲಿ ವ್ಯವಸ್ಥೆ ಮತ್ತು ಊಟದ ವ್ಯವಸ್ಥೆಯನ್ನು ದೇವಸ್ಥಾನದ ಟ್ರಸ್ಟ್ ವತಿಯಿಂದ ಮಾಡಲಾಗಿತ್ತು. ಅಜ್ಜಯ್ಯನ ಗದ್ದಿಗೆಗೆ ಅಭಿಷೇಕ ಮತ್ತು ವಿಶೇಷ ಪೂಜಾಲಂಕಾರ ಮಾಡಲಾಗಿತ್ತು.

# ಮಹಿಳಾ ಉದ್ಯೋಗಿಗಳನ್ನು ನೇಮಿಸಿಕೊಳ್ಳದಂತೆ ತಾಲಿಬಾನ್ ಆದೇಶ

ಕಾಬುಲ್, ಡಿ. 30- ಸರ್ಕಾರೇತರ ಸಂಘಟನೆಗಳು ಮಹಿಳೆಯರನ್ನು ಉದ್ಯೋಗಕ್ಕೆ ನೇಮಿಸಿಕೊಳ್ಳದಂತೆ ಅಫ್ಘಾನಿಸ್ತಾನದ ಆಡಳಿತರೂಢ ತಾಲಿಬಾನ್ ಆದೇಶ ಹೊರಡಿಸಿದೆ. ಇಸ್ಲಾಮಿಕ್ ಪದ್ಧತಿಯಂತೆ ಮಹಿಳೆಯರು ಸರಿಯಾಗಿ ಮುಸುಕು ಧರಿಸುತ್ತಿಲ್ಲ ಎಂಬ ಆರೋಪಗಳ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ. ದೇಶಿಯ ಹಾಗೂ ಅಂತರರಾಷ್ಟ್ರೀಯ ಸರ್ಕಾರೇತರ ಸಂಘಟನೆಗಳು ಮಹಿಳೆಯರನ್ನು ನೇಮಿಸಿಕೊಳ್ಳಬಾರದು. ನೇಮಿಸಿಕೊಂಡಲ್ಲಿ ಅವರು ಆಫ್ಘಾನಿಸ್ತಾನದಲ್ಲಿ ಕಾರ್ಯನಿರ್ವಹಿಸುವ ಅನುಮತಿ ರದ್ದುಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

## ಗೋಶಾಲೆಗೆ ಹಸಿ ಹುಲ್ಲು ನೀಡಲು ಕರೆ

ದಾವಣಗೆರೆ, ಡಿ.30- ಆವರಗೆರೆಯಲ್ಲಿರುವ ಭಗವಾನ್ ಗೋ ಶಾಲೆಗೆ ರಾಗಿ ಮತ್ತು ಭತ್ತದ



ಹಸಿ ಹುಲ್ಲು ಬೇಕಾಗಿದೆ. ಖರೀದಿಗೆ ಕೊಡಲಿಚ್ಛಿಸುವವರು ಜಿತೇಂದ್ರ ಜೈನ್ (94485 16033) ಅವರನ್ನು ಸಂಪರ್ಕಿಸುವಂತೆ ಗೋಶಾಲೆಯ ಕಾರ್ಯದರ್ಶಿ ದಿನೇಶ್ ಜೈನ್ ತಿಳಿಸಿದ್ದಾರೆ.

## ಅರ್ಚಕರಿಗೆ ತಿಂಗಳಿಗೆ 18 ಸಾವಿರ ಕೇಜ್ರಿವಾಲ್ ಭರವಸೆ

ನವದೆಹಲಿ, ಡಿ. 30- ಆಮ್ ಆದ್ಮಿ ಪಾರ್ಟಿ ದೆಹಲಿಯಲ್ಲಿ ಮತ್ತೆ ಅಧಿಕಾರಕ್ಕೆ ಬಂದರೆ ಹಿಂದೂ ದೇವಾಲಯದ ಅರ್ಚಕರು ಹಾಗೂ ಗುರುದ್ವಾರದ ಗ್ರಂಥಿಗಳಿಗೆ ತಿಂಗಳಿಗೆ 18 ಸಾವಿರ ಭತ್ಯೆ ನೀಡಲಾಗುವುದು ಎಂದು ಪಕ್ಷದ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಘೋಷಿಸಿದ್ದಾರೆ. ಪೂಜಾರಿಗಳು ಹಾಗೂ ಗ್ರಂಥಿಗಳು ನಮ್ಮ ಸಮಾಜದಲ್ಲಿ ಪ್ರಮುಖ ಸ್ಥಾನ ವಹಿಸಿದ್ದಾರೆ. ಆದರೆ ಈ ವಲಯವನ್ನು ಕೆಲವೊಮ್ಮೆ ನಿರ್ಲಕ್ಷಿಸಲಾಗುತ್ತಿದೆ. ಇದೇ ಮೊದಲ ಬಾರಿಗೆ ನಾವು ಪೂಜಾರಿ ಗ್ರಂಥಿ ಸಮ್ಮಾನ್ ಯೋಜನೆಯ ಮೂಲಕ ತಿಂಗಳಿಗೆ 18 ಸಾವಿರ ರೂ.ಗಳ ಭತ್ಯೆ ನೀಡುತ್ತೇವೆ ಎಂದವರು ಹೇಳಿದ್ದಾರೆ.


॥ ಶ್ರೀ ಚೌಡೇಶ್ವರಿದೇವಿ ಕೃಪೆ ॥

## ವೈಕುಂಠ ಸಮಾರಾಧನೆ ಆಹ್ವಾನ



ಶ್ರೀ ಶ್ರೀ ಶ್ರೀ ದಿವ್ಯಜ್ಞಾನಾನಂದ ಸ್ವಾಮಿಗಳು, ತಪಸೀಹಳ್ಳಿ. ದೊಡ್ಡಬಳ್ಳಾಪುರ ಇವರ ಕೃಪಾಶೀರ್ವಾದದೊಂದಿಗೆ

ದಾವಣಗೆರೆ ಸಿಟಿ ಪಿ.ಜೆ. ಬಡಾವಣೆ ವಾಸಿ ಶ್ರೀಮತಿ ಸಿ. ವಿಜಯಲಕ್ಷ್ಮಿ ಕಿರಿಗೇರಿ ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 21.12.2024ನೇ ಶನಿವಾರ ಬೆಳಿಗ್ಗೆ 6.15ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಹೆಚ್. ಚಂದ್ರಪ್ಪ ಕಿರಿಗೇರಿ**

(ಮಾಲೀಕರು, ಶ್ರೀ ಆಂಜನೇಯ ಸ್ವಾಮಿ ಎಂಟರ್‌ಪ್ರೈಸಸ್, ದಾವಣಗೆರೆ)

ಇವರು ಸ್ವರ್ಗಸ್ಥರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

"ವೈಕುಂಠ ಸಮಾರಾಧನೆ"ಯನ್ನು

ದಿನಾಂಕ : 31.12.2024ನೇ ಮಂಗಳವಾರದಂದು ಬೆಳಿಗ್ಗೆ 11.00 ಗಂಟೆಗೆ ತೊಗಟವೀರ ಕಲ್ಯಾಣ ಮಂಟಪ, ಎಂ.ಸಿ.ಸಿ. ಎ ಬ್ಲಾಕ್, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ಧರ್ಮಪತ್ನಿ : ಶ್ರೀಮತಿ ಸಿ. ವಿಜಯಲಕ್ಷ್ಮಿ ಕಿರಿಗೇರಿ ಮತ್ತು ಮಕ್ಕಳು ಹಾಗೂ ಅಳಿಯಂದಿರು
ಶ್ರೀಮತಿ ಶಿಲ್ಪಾ, ಶ್ರೀ ಟಿ.ಜೆ. ದಿಲೀಪ್‌ಕುಮಾರ್, ಮೊಮ್ಮಕ್ಕಳಾದ : ದೀವಂತ್, ತೀಕ್ಷಾ
ಶ್ರೀಮತಿ ಸೌಮ್ಯ ಶ್ರೀ ಅಭಿಲಾಷ್ ಡಿ.ಕೆ., ಮೊಮ್ಮಗಳು : ಆನ್ಯಾ, ಮಗಳು : ಸಿ. ಶ್ವೇತಾ ಕಿರಿಗೇರಿ.
ಶ್ರೀಮತಿ ಎಚ್. ಮಾರುತೆಪ್ಪ ಕಿರಿಗೇರಿ, ಶ್ರೀಮತಿ ಮೀನಾಕ್ಷಮ್ಮ ಕಿರಿಗೇರಿ ಹಾಗೂ ಮಕ್ಕಳು,
ಶ್ರೀಮತಿ ನಾಗಲಕ್ಷ್ಮಿ ಶ್ರೀ ಹೆಚ್. ಅಶೋಕ ಕಿರಿಗೇರಿ ಹಾಗೂ ಮಕ್ಕಳು, ಶ್ರೀಮತಿ ಅನಿತಾ ಶ್ರೀ ಎಚ್. ಅನಂತ ಕಿರಿಗೇರಿ ಹಾಗೂ ಮಕ್ಕಳು, ಕಿರಿಗೇರಿ ವಂಶಸ್ಥರು ಹಾಗೂ ಬಂಧು-ಮಿತ್ರರು. ಫೋ. : 99452 22219

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.




## ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ

ಶಿರಮಗೊಂಡನಹಳ್ಳಿ, ದಾವಣಗೆರೆ ತಾಲ್ಲೂಕು

### ಹೃದಯಪೂರ್ವಕ ಕೃತಜ್ಞತೆಗಳು



ದಿನಾಂಕ 29.12.2024ರ ಭಾನುವಾರ ನಡೆದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ನಮಗೆ ಮತದಾನ ಮಾಡಿ ಚುನಾಯಿಸಿದ ಸಂಘದ ಸರ್ವ ಸದಸ್ಯರಿಗೂ, ಪ್ರತ್ಯಕ್ಷ - ಪರೋಕ್ಷವಾಗಿ ಸಹಕರಿಸಿದ ಗ್ರಾಮದ ಎಲ್ಲಾ ಹಿರಿಯರಿಗೂ, ಮುಖಂಡರಿಗೂ, ಕಾರ್ಯಕರ್ತರಿಗೂ, ಗ್ರಾಮಸ್ಥರಿಗೂ ಹೃದಯಪೂರ್ವಕ ಕೃತಜ್ಞತೆಗಳು.
ನಮಗೆ ಆಶೀರ್ವದಿಸಿದ ಮಾಜಿ ಸಚಿವರೂ, ಹಿರಿಯರೂ ಆದ ಶ್ರೀಯುತ ಎಸ್.ಎ. ರವೀಂದ್ರನಾಥ್ ಅವರಿಗೆ ವಿಶೇಷ ಕೃತಜ್ಞತೆಗಳು.



ಎ.ಬಿ. ಕರಿಬಸಪ್ಪ ನಿರ್ದೇಶಕರು | ಸೌಭಾಗ್ಯಮ್ಮ ನಿರ್ದೇಶಕರು | ಶಿವಾಜಿ ಕೆ.ಹೆಚ್. ನಿರ್ದೇಶಕರು | ಪಂಚಾಕ್ಷರಿ ನಿರ್ದೇಶಕರು | ಪ್ರದೀಪ್ ರಾಯಪ್ಪ ನಿರ್ದೇಶಕರು
ಹರೀಶ್ ಜಿ.ಆರ್. ನಿರ್ದೇಶಕರು | ಮಂಜುನಾಥ್ ಜಿ. ನಿರ್ದೇಶಕರು | ಲಕ್ಷ್ಮಣ ನಿರ್ದೇಶಕರು | ರಮೇಶ್ ನಿರ್ದೇಶಕರು | ದುರುಗಪ್ಪ ನಿರ್ದೇಶಕರು


## ನಗರದಲ್ಲಿ ಪ್ರಾದೇಶಿಕ ಸಾರಿಗೆ ಶಿಬಿರ

ದಾವಣಗೆರೆ, ಡಿ.30-2025ನೇ ವರ್ಷದಲ್ಲಿ ದಾವಣಗೆರೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ವತಿಯಿಂದ ಶಿಬಿರ ಆಯೋಜಿಸಲಾಗಿದೆ.

ಪ್ರತಿ ತಿಂಗಳು 5 ನೇ ತಾರೀಖಿನಂದು ಮಲೇಬೆನ್ನೂರಿನ ನೀರಾವರಿ ಇಲಾಖೆಯ ಸಬ್ ಡಿವಿಜನ್ ಕಚೇರಿ ಆವರಣ ಮತ್ತು ಹರಿಹರದ ಎ.ಪಿ.ಎಂ.ಸಿ ಆವರಣ. ಪ್ರತಿ ತಿಂಗಳು 10ನೇ ತಾರೀಖಿನಂದು ಚನ್ನಗಿರಿ ಎ.ಪಿ.ಎಂ.ಸಿ ಆವರಣ, ಪ್ರತಿ ತಿಂಗಳು 20ನೇ ತಾರೀಖಿನಂದು ಜಗಳೂರು ಎ.ಪಿ.ಎಂ.ಸಿ ಆವರಣ. ಪ್ರತಿ ತಿಂಗಳು 23ನೇ ತಾರೀಖಿನಂದು ನ್ಯಾಮತಿ ಮತ್ತು ಹೊನ್ನಾಳಿ ಎ.ಪಿ. ಎಂ.ಸಿ ಆವರಣದಲ್ಲಿ ಸಾರಿಗೆ ಶಿಬಿರಗಳನ್ನು ನಡೆಸಲಾಗುವುದು ಎಂದು ಸಾರಿಗೆ ಅಧಿಕಾರಿ ಸಿ.ಎಸ್. ಪ್ರಮುತೇಶ್ ತಿಳಿಸಿದ್ದಾರೆ.

# ಶಿರಮಗೊಂಡನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಆಯ್ಕೆ



ದಾವಣಗೆರೆ, ಡಿ.30- ಶಿರಮಗೊಂಡನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನಿನ್ನೆ ನಡೆದ ನಿರ್ದೇಶಕರ ಚುನಾವಣೆಯಲ್ಲಿ ಎ.ಬಿ.ಕರಿಬಸಪ್ಪ, ಸೌಭಾಗ್ಯಮ್ಮ, ಕೆ.ಹೆಚ್. ಶಿವಾಜಿ, ಹೆಚ್.ಜಿ. ಪಂಚಾಕ್ಷರಿ, ಪ್ರದೀಪ್ ರಾಯಪ್ಪ, ಜಿ.ಆರ್.ಹರೀಶ್, ಜಿ.ಮಂಜುನಾಥ್, ಲಕ್ಷ್ಮಣ, ರಮೇಶ್, ದುರುಗಪ್ಪ ಅವರುಗಳು ಚುನಾಯಿತರಾಗಿದ್ದಾರೆ. ವಿಜೇತರನ್ನು ಮಾಜಿ ಸಚಿವರಾದ ಎಸ್.ಎ.ರವೀಂದ್ರನಾಥ್ ಅವರು ಅಭಿನಂದಿಸಿದ್ದಾರೆ.

# ಬ್ಯಾಂಕುಗಳ ಜಿ.ಎನ್.ಪಿ.ಎ. 12 ವರ್ಷಗಳಲ್ಲೇ ಅತಿ ಕಡಿಮೆ

ನವದೆಹಲಿ, ಡಿ. 30 - ಬ್ಯಾಂಕುಗಳ ಆಸ್ತಿಗಳ ಗುಣಮಟ್ಟ ಹೆಚ್ಚಾಗಿದೆ. ಸೆಪ್ಟಂಬರ್ ತಿಂಗಳಲ್ಲಿ ಜಿ.ಎನ್.ಪಿ.ಎ. ಶೇಕಡ 2.6ರಷ್ಟಿದ್ದು ಇದು 12 ವರ್ಷಗಳಲ್ಲೇ ಅತಿ ಕಡಿಮೆ ಎಂದು ರಿಸರ್ವ್ ಬ್ಯಾಂಕ್ ತಿಳಿಸಿದೆ. ಎನ್‌ಪಿಎ ಪ್ರಮಾಣ ಈ ಅವಧಿಯಲ್ಲಿ ಶೇಕಡ 0.6 ರಷ್ಟಿದೆ ಎಂದು ರಿಸರ್ವ್ ಬ್ಯಾಂಕ್ ಹೇಳಿದೆ.


## ಸವಿನೆನಪು



ಜನನ 20.11.1963, ಮರಣ 31.12.2006

**ಶ್ರೀಮತಿ ಅನುರಾಧ**

ಉಪ ತಹಶೀಲ್ದಾರ್

ನೀವು ನಮ್ಮನ್ನಗಲಿ 18 ವರ್ಷಗಳಾದವು. ನಿಮ್ಮ ನೆನಪನ್ನು ನಾವು ಜೀವಂತವಾಗಿರುವ ತನಕ ಮರೆಯಲಾರೆವು.

ಪತಿ : ಜಿ.ಗುರುರಾಜ
ಮಗಳು : ಶ್ರೀವಿಂಧ್ಯಾ ಜಿ.
ಕುಟುಂಬದವರು ಹಾಗೂ ಬಂಧುಗಳು, ಅಮರಾವತಿ ಕಾಲೋನಿ, ಹರಿಹರ.



## ಕುದುರಿ ರಾಜಶೇಖರಪ್ಪ ನಿಧನ



ದಾವಣಗೆರೆ ಪಿ.ಜೆ. ಬಡಾವಣೆ, ಮುದ್ದಳ್ಳಿ ಕಾಂಪೌಂಡ್ ಕ್ವಾಟ್ರಸ್, ರಾಮಕೃಷ್ಣ ನರ್ಸಿಂಗ್ ಹೋಮ್ ಹಿಂಭಾಗದ ವಾಸಿಗಳಾದ **ಕುದುರಿ ರಾಜಶೇಖರಪ್ಪ** ಅವರು ದಿನಾಂಕ 29.12.24 ಭಾನುವಾರ ತಡರಾತ್ರಿ 1.40ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 83 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ, ಸೊಸೆ, ಮೊಮ್ಮಕ್ಕಳು, ಸಹೋದರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 31.12.2024ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಗಾಂಧಿನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ, ಮೊ. 903524 3579



## ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀ ಹೆಚ್. ಚಂದ್ರಪ್ಪ ಕಿರಿಗೇರಿ**

(ಮಾಲೀಕರು ಶ್ರೀ ಆಂಜನೇಯ ಸ್ವಾಮಿ ಎಂಟರ್‌ಪ್ರೈಸಸ್, ದಾವಣಗೆರೆ)

ಇವರು ದಿನಾಂಕ : 21.12.2024ರ ಶನಿವಾರದಂದು ನಿಧನರಾಗಿದ್ದು, ಇವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ, ಭಗವಂತನು ಮೃತರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಕುಟುಂಬ ವರ್ಗದವರಿಗೆ ದುಃಖ ಭರಿಸುವ ಶಕ್ತಿಯನ್ನು ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಶ್ರೀ ಎಲ್.ಟಿ. ದ್ವಾರಕನಾಥ್
ಅಧ್ಯಕ್ಷರು, ತೋಗಟವೀರ ಸಮಾಜ ಸೇವಾ ಸಮಿತಿ ಟ್ರಸ್ಟ್, ದಾವಣಗೆರೆ.
ಶ್ರೀ ಎಲ್. ಟಿ. ಜಗನ್ನಾಥ್, ಸಮಾಜದ ಮುಖಂಡರು
ಶ್ರೀ ಅಕ್ಕಿ ರಾಮಚಂದ್ರ ಹೆಚ್. ಹಿರೇಬಿದರಿ
ತೋಗಟವೀರ ಕ್ಷತ್ರಿಯ ಮಹಾಮಂಡಳಿ ಸದಸ್ಯರು, ತಪಸ್ಸೀಹಳ್ಳಿ, ದೊಡ್ಡಬಳ್ಳಾಪುರ. ಹಾಗೂ ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಸಂಘಟನಾ ಕಾರ್ಯದರ್ಶಿ, ದಾವಣಗೆರೆ.
ಶ್ರೀ ಲಕ್ಷ್ಮಣ್ ಎನ್. ಚಿಂತಾ
ನಾಮನಿರ್ದೇಶಿತ ಸದಸ್ಯರು, ನಗರಸಭೆ, ರಾಣೇಬೆನ್ನೂರು.
ಭಂಡಾರಿ ದುಗ್ಗಪ್ಪ, ಬಿ.ಟಿ. ಸುಬ್ರಮಣ್ಯ, ಅಕ್ಷಯ್ ಕಡಕೋಳ. ಆನಂದ್ ಬಿ., ಬ್ಯಾಂಕ್ ಹನುಮಂತಪ್ಪ, ದಾವಣಗೆರೆ.



## ಹುಟ್ಟುಹಬ್ಬದ ಶುಭಾಶಯಗಳು




ಇಂದು ತಮ್ಮ ಜನ್ಮ ದಿನದ ಸಂಭ್ರಮದಲ್ಲಿರುವ ನಮ್ಮ ಸೊಸೈಟಿಯ ಅಧ್ಯಕ್ಷರೂ, ಸೇಂಟ್ ಜಾನ್ಸ್ ಶಾಲೆಯ ಖಜಾಂಚಿಗಳೂ, ಉದ್ಯಮಿಗಳೂ ಆದ

**ಶ್ರೀ ಪ್ರವೀಣ್ ಹುಲ್ಲುಮನೆ**

ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.

ಸ್ಥಾಪನೆ : 2020-2021



ತಿಪ್ಪೇಸ್ವಾಮಿ ಪವಾಡಪ್ಪರ ಉಪಾಧ್ಯಕ್ಷರು | ರಾಕೇಶ್ ಆರ್.ಎಸ್. ನಿರ್ದೇಶಕರು | ಅವಿನಾಶ್ ಬಂದೋಳ್ ನಿರ್ದೇಶಕರು | ರೇಣುಕಾ ಆನಂದ್ ನಿರ್ದೇಶಕರು | ಸಂಧ್ಯಾರಾಣಿ ಹೆಚ್.ಜಿ. ನಿರ್ದೇಶಕರು
ಚನ್ನಬಸವನಗೌಡ ಎಸ್.ಕೆ. ನಿರ್ದೇಶಕರು | ಸಾಗರ್ ಎಸ್.ಎನ್. ನಿರ್ದೇಶಕರು | ಕಿರಣ್ ಯು. ನಿರ್ದೇಶಕರು | ಭೀಮೇಶ್ ಹೆಚ್.ಎಲ್. ನಿರ್ದೇಶಕರು | ಜಯರಾಜ್ ಎ. ನಿರ್ದೇಶಕರು
ವಿನಯ್‌ಕುಮಾರ್ ಎಸ್.ಎಂ. ನಿರ್ದೇಶಕರು | ಪ್ರದೀಪ್ ಕಣಸಾಳ್ ನಿರ್ದೇಶಕರು | ಸುಧಾ ಅವಿನಾಶ್ ಮುಖ್ಯ ಕಾರ್ಯನಿರ್ವಾಹಕರು | ಮಲ್ಲೇಶ್ ಪಿ. ಕ್ಯಾಷಿಯರ್ | ಅಂಬರೀಶ್ ಎಸ್. ಪಿಗ್ಮಿ ಸಂಗ್ರಹಕಾರರು

**ಶ್ರೀ ದುರ್ಗಾಂಬಿಕಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**

ಬಂದೋಳ್ ರಾಮಪ್ಪ ಕಾಂಪ್ಲೆಕ್ಸ್, ಶ್ರೀ ದುರ್ಗಾಂಬಿಕಾ ದೇವಸ್ಥಾನದ ಹತ್ತಿರ, ನಿಟುವಳ್ಳಿ, ದಾವಣಗೆರೆ. ಮೊ. : 95381 86222, 95381 89222


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas